## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ


بِسْمِ اللہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَکُمُ اللہُ بِبَدْرٍ وَّاَنْتُمْ اَذِلَّۃٌ

ವರ್ಷ: 01

ಸಂಚಿಕೆ: 08

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**05 ಮಾರ್ಚ್ 2020, 05 ಅಮಾನ್ 1399 ಹಿಜರಿ ಶಮ್ಸಿ, 09 ರಜಬ್ 1441 ಹಿಜರಿ ಖಮರಿ.**


## ಅಲ್ಲಾಹನ ಉಪದೇಶ

اِنَّ الَّذِیْنَ اشْتَرَوُا الْکُفْرَ بِالْاِیْمَانِ لَنْ یَّضُرُّوا اللہَ شَیْئًا ۚ وَلَھُمْ عَذَابٌ اَلِیْمٌ ○

*(ಆಲಿ ಇಮ್ರಾನ್ 178)*

ಅಂದರೆ: ಸತ್ಯವಿಶ್ವಾಸವನ್ನು ತ್ಯಜಿಸಿ ಅವಿಶ್ವಾಸವನ್ನು ಹೊಂದಿದವರು ಖಂಡಿತವಾಗಿಯೂ ಅಲ್ಲಾಹನಿಗೆ ಯಾವ ಹಾನಿಯನ್ನೂ ಉಂಟುಮಾಡಲು ಶಕ್ತರಲ್ಲ. ಅವರಿಗೆ ಯಾತನಾಮಯ ಶಿಕ್ಷೆ ಇದೆ.

**ಇದೊಂದು ವಾಸ್ತವಿಕ ಹಾಗೂ ನಿಶ್ಚಯವಾದ ವಿಷಯವಾಗಿದೆ. ಅಲ್ಲಾಹನು ತನ್ನನ್ನು ತಾನು ಸಹಕರಿಸುವ ಜನರಿಗೆ ಸಹಕರಿಸುತ್ತಾನೆ. ಆದರೆ ಯಾರು ಆಲಸ್ಯ ಹಾಗೂ ಅಲಕ್ಷ್ಯದಿಂದ ಕಾರ್ಯ ಮಾಡುವನೋ ಅಂತಿಮವಾಗಿ ನಾಶ ಹೊಂದುತ್ತಾನೆ.**

# ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ‘ಲಿಕುಲ್ಲಿ ದಾಯಿನ್ ದವಾಉನ್’ ನ ವಿಶಾಲವಾದ ಅರ್ಥ

‘ಲಿಕುಲ್ಲಿ ದಾಯಿನ್ ದವಾಉನ್’ ನ ವಿಶಾಲವಾದ ಅರ್ಥದ ಕೆಲವು ನೀತಿಗಳನ್ನು ಪರಿವರ್ತಿಸಲು ಸಾಧ್ಯವಿದೆ. ಕೆಲವು ಇಲ್ಲ ಎಂಬ ಮಾತು ಸರಿಯಾದುದಲ್ಲ. ಪ್ರತಿಯೊಂದು ರೋಗಕ್ಕೆ ಚಿಕಿತ್ಸೆ ಇದೆ. ‘ಲಿಕುಲ್ಲಿ ದಾಯಿನ್ ದವಾಉನ್’ ಅಕಟಾ! ಜನರು ಈ ಪವಿತ್ರ ಹೇಳಿಕೆಗೆ ಬೆಲೆ ನೀಡುತ್ತಿಲ್ಲ. ಮತ್ತು ಅದನ್ನು ಕೇವಲ ಬಾಹ್ಯ ರೋಗಗಳಿಗೆ ಸೀಮಿತ ಎಂದು ಭಾವಿಸುತ್ತಾರೆ. ಇದು ಎಷ್ಟೊಂದು ಮೂರ್ಖತನ ಹಾಗೂ ತಪ್ಪು ಕಲ್ಪನೆಯಾಗಿದೆ. ಒಂದು ನಶ್ವರ ಶರೀರಕ್ಕಾಗಿ ಸುಧಾರಣೆ ಹಾಗೂ ಕಲ್ಯಾಣಕ್ಕಾಗಿ ಎಲ್ಲಾ ಮಾರ್ಗಗಳು ತೆರೆದಿರುವಾಗ ಮನುಷ್ಯನ ಆಧ್ಯಾತ್ಮಿಕ ರೋಗಗಳಿಗಾಗಿ ಅಲ್ಲಾಹನ ಬಳಿ ಏನೂ ಇಲ್ಲ ಎಂಬ ವಿಷಯ ಒಪ್ಪತಕ್ಕದ್ದಲ್ಲ. ಅವಶ್ಯವಾಗಿ! ಇದೊಂದು ಯಥಾರ್ಥವಾದ ಮತ್ತು ನಿಶ್ಚಿತವಾದ ಮಾತಾಗಿದೆ. ಅಲ್ಲಾಹನು ತನ್ನನ್ನು ತಾನು ಸಹಕರಿಸುವಂತಹ ಜನರಿಗೆ ಸಹಕರಿಸುತ್ತಾನೆ. ಆದರೆ ಯಾರು ಆಲಸ್ಯ ಹಾಗೂ ದುಡುಕಿನಿಂದ ಕಾರ್ಯ ಮಾಡುವರೋ ಅವರು ಅಂತಿಮವಾಗಿ ನಾಶಗೊಳ್ಳುವರು.

### ವೃದ್ಧತನದಲ್ಲಿ ಎರಡು ವಿಧಗಳಿವೆ

ಮನುಷ್ಯನ ಮೇಲೆ **“ನಖ್‌ಸ್ ಫಿಲ್ ಖಲ್‌ಖಿ”** ಯ ಕಾಲ ಬರುತ್ತದೆ. ಅದನ್ನು ವೃದ್ಧತನ ಎನ್ನುತ್ತಾರೆ. ಆ ಸಮಯ ಕಣ್ಣುಗಳು ತನ್ನ ಕಾರ್ಯ ಬಿಟ್ಟು ಬಿಡುತ್ತವೆ ಮತ್ತು ಕಿವಿಗಳು ಕೇಳಿಸುವುದಿಲ್ಲ. ಅಂತೂ ಪ್ರತಿಯೊಂದು ಶರೀರದ ಅಂಗ ದುರ್ಬಲಗೊಂಡು ಕಾರ್ಯ ಸ್ಥಗಿತಗೊಳ್ಳುವ ಮಟ್ಟಕ್ಕೆ ತಲುಪುತ್ತವೆ. ಅದೇ ರೀತಿ ನೆನಪಿಡಿರಿ ವೃದ್ಧತನದಲ್ಲಿ ಎರಡು ವಿಧಗಳಿವೆ. ಶಾರೀರಿಕ ಮತ್ತು ಸ್ವಾಭಾವಿಕ. ಮೇಲೆ ವಿವರಿಸಿದ ವಿಷಯವು ಶಾರೀರಿಕವಾದುದಾಗಿದೆ. ಸ್ವಾಭಾವಿಕ ಎಂದರೆ ಯಾರು ತನ್ನ ರೋಗಗಳ ಬಗ್ಗೆ ಚಿಂತಿಸುವುದಿಲ್ಲವೋ ಅವರನ್ನು ಅದು ದುರ್ಬಲಗೊಳಿಸಿ ಸಮಯಕ್ಕಿಂತ ಮುಂಚೆಯೇ ವೃದ್ಧನನ್ನಾಗಿ ಮಾಡುತ್ತದೆ. ಶಾರೀರಿಕ ಪದ್ಧತಿಯಲ್ಲಿ ವ್ಯವಸ್ಥೆ ಇದ್ದಂತೆಯೇ ಆಂತರಿಕ ಹಾಗೂ ಬಾಹ್ಯ ಅವಸ್ಥೆಯಲ್ಲಿಯೂ ಇದೆ. ಯಾರೊಬ್ಬರು ತನ್ನದುರ್ಗುಣಗಳನ್ನು ಸದ್ಗುಣಗಳಲ್ಲಿ ಪರಿವರ್ತಿಸಲು ಪ್ರಯತ್ನಿಸುವುದಿಲ್ಲವೋ ಅವನ ಗುಣಗಳು ಕ್ಷೀಣ ಅವಸ್ಥೆಗೆ ತಲುಪುತ್ತದೆ. ರಸೂಲುಲ್ಲಾಹ್(ಸ) ರವರ ಹೇಳಿಕೆ ಹಾಗೂ ಪವಿತ್ರ ಖುರ್‌ಆನಿನ ಶಿಕ್ಷಣದನ್ವಯ ಇದು ಸಾಬೀತುಗೊಂಡಿದೆ. ಪ್ರತಿಯೊಂದು ರೋಗಕ್ಕೆ ಮದ್ದು (ಚಿಕಿತ್ಸೆ) ಇದೆ. ಆದರೆ ಆಲಸ್ಯ ಹಾಗೂ ಅಲಕ್ಷ್ಯತನ ಮನುಷ್ಯನ ಮೇಲೆ ಆವರಿಸಿದಾಗ ನಾಶವಲ್ಲದೇ ಇನ್ನೇನಾಗಲು ಸಾಧ್ಯ. ಒಬ್ಬ ವೃದ್ಧನ ಹಾಗೆ ದೌರ್ಬಲ್ಯದ ರೀತಿಯಲ್ಲಿ ಜೀವಿಸಿದರೆ ಹೇಗೆ ಬಚಾವಾಗಲು ಸಾಧ್ಯ.

### ನೀತಿ ಪರಿವರ್ತನೆಯು ಪ್ರಯತ್ನ ಹಾಗೂ ಪ್ರಾರ್ಥನೆ (ದುಆ) ಮೂಲಕ ಸಾಧ್ಯವಿದೆ.

ಎಲ್ಲಿಯವರೆಗೆ ಮನುಷ್ಯನು ಪ್ರಯತ್ನ ಪಡುವುದಿಲ್ಲವೋ, ಪ್ರಾರ್ಥನೆ (ದುಆ) ಗಳಿಂದ ಕಾರ್ಯ ಮಾಡುವುದಿಲ್ಲವೋ ಹೃದಯವನ್ನು ಆವರಿಸಿದ ಪರದೆಯು ದೂರವಾಗಲು ಸಾಧ್ಯವಿಲ್ಲ. ಆದ್ದರಿಂದ ಅಲ್ಲಾಹನು ಹೇಳಿದನು. **ಇನ್ನಲ್ಲಾಹ ಲಾಯುಗೈಯಿರು ಮಾ ಬಿಖೌಮಿನ್ ಹತ್ತಾ ಯುಗೈಯಿರು ಮಾ ಬಿ ಅನ್‌ಫುಸಿಹಿಮ್** (ಅರ್ರಾಅದ್:12) “ಒಂದು ಸಮುದಾಯದವರು ತಮ್ಮ ಹೃದಯದಲ್ಲಿರುವುದಕ್ಕೆ ಸ್ವಯಂ ಮಾರ್ಪಾಡು ಮಾಡುವ ತನಕ ಅವರ ಸ್ಥಿತಿಗೆ ಅಲ್ಲಾಹನು ಮಾರ್ಪಾಟು ಮಾಡಲಾರನು.” ಧೈರ್ಯ, ಶೌರ್ಯತನದಿಂದ ಕಾರ್ಯವೆಸಗಲಿಲ್ಲವಾದರೆ ಹೇಗೆ ಮಾರ್ಪಾಟು ಸಾಧ್ಯ. ಇದು ಅಲ್ಲಾಹನ ಅಪರ್ವತಿತ ನಿಯಮವಾಗಿದೆ. ಅಲ್ಲಾಹನು ಹೀಗೆ ಹೇಳಿದನು. **ವಸಲನ್ ತಜಿದ ಲಿದುನ್ನತಿಲ್ಲಾಹಿ ತಬ್‌ದೀಲ** (ಅಲ್‌ಅಹ್ಜಾಬ್:63) ಆದ್ದರಿಂದ ನಮ್ಮ ಜಮಾತ್ ಆಗಲಿ ಅಥವಾ ಯಾರೇ ಆಗಲಿ ತಮ್ಮ ನೀತಿಗಳನ್ನು (ಗುಣಗಳನ್ನು) ಮಾರ್ಪಾಟು ಮಾಡಲು ಪ್ರಯತ್ನಪಟ್ಟಾಗ ಮತ್ತು ಪ್ರಾರ್ಥನೆಯಿಂದ ಮುಂದುವರೆದಾಗ ಮಾತ್ರ ಸಾಧ್ಯವಿದೆಯೇ ಹೊರತು ಅಸಾಧ್ಯವಾಗಿದೆ.

### ನೀತಿ (ಗುಣಗಳು) ಮಾರ್ಪಾಟು ಆಗುವ ಕುರಿತು ಎರಡು ಅಭಿಮತಗಳು:

ನೀತಿ(ಗುಣಗಳು) ಮಾರ್ಪಾಟುಗಳ ಕುರಿತು ವಿಧ್ವಂಸರ ಎರಡು ಅಭಿಮತಗಳಿವೆ. ಒಂದನೆಯದಾಗಿ ಮನುಷ್ಯನು ನೀತಿ ಮಾರ್ಪಾಟು ಹೊಂದಲು ಶಕ್ತನಾಗಿದ್ದಾನೆ ಎಂಬ ನಿಲುವು ಹೊಂದಿದವರು, ಎರಡನೆಯದಾಗಿ ಅವರು ‘ಶಕ್ತನಲ್ಲ’ ಎಂಬುವವರಿದ್ದಾರೆ. ನಿಜ ಹೇಳಬೇಕೆಂದರೆ ಆಲಸ್ಯ ಹಾಗೂ ಅಲಕ್ಷ್ಯತನ ಇರದಿದ್ದರೆ ಮತ್ತು ಕೈ ಕಾಲುಗಳ ಮೂಲಕ ಪ್ರಯತ್ನಿಸಿದರೆ ಮಾರ್ಪಾಟು ಸಾಧ್ಯವಿದೆ. ನನಗೆ ಈ ಸಂದರ್ಭದಲ್ಲಿ ಒಂದು ಪ್ರಸಂಗ ನೆನಪಾಯಿತು. ಅದು ಹೀಗಿದೆ. ಹೇಳುತ್ತಾರೆ. ಯುನಾನಿಯರ ಸುಪ್ರಸಿದ್ಧ ಫಿಲಾಸಫರ್ ಅಫಲಾತೂನ್ ಬಳಿ ಒಬ್ಬ ವ್ಯಕ್ತಿ ಬಂದನು, ಬಾಗಿಲ ಬಳಿ ನಿಂತು ಒಳಗೆ ಸೂಚನೆ ಮುಟ್ಟಿಸಿದನು. ಅಫಲಾತೂನನ ಒಂದು ನಿಯಮವಿತ್ತು. ಎಲ್ಲಿಯವರೆಗೆ ಅವನು ಬರುವವರ ಸ್ವರೂಪ ಹಾಗೂ ಮುಖ ಚಹರೆಯನ್ನು ತಿಳಿದುಕೊಳ್ಳುತ್ತಿರಲಿಲ್ಲವೋ ಅಲ್ಲಿಯ ತನಕ ಒಳಗೆ ಬರಲು ಅನುಮತಿ ನೀಡುತ್ತಿರಲಿಲ್ಲ. ಅವನು ಗ್ರಹಶಕ್ತಿಯಿಂದಲೇ ಅರಿಯುತ್ತಿದ್ದ. ಬರುವ ಆ ವ್ಯಕ್ತಿ ಹೇಗಿದ್ದಾನೆ ಹೇಗಿಲ್ಲ ಎಂಬುದು. ಸೇವನಕನು ಆ ವ್ಯಕ್ತಿಯ ಸ್ವರೂಪ ಎಂದಿನ ವಾಡಿಕೆಯಂತೆ ತಿಳಿಸಿಕೊಟ್ಟನು ಅಫಲತೂನನು ಉತ್ತರ ಹೇಳಿಕೊಟ್ಟ. ಆ ವ್ಯಕ್ತಿಗೆ ಹೇಳಿಬಿಡಿ. ಅವನು ತುಂಬ ಅವಗುಣಕಾರಿಯಾಗಿದ್ದಾನೆ. ಆದ್ದರಿಂದ ನಾನು ಅವನೊಂದಿಗೆ ಭೇಟಿಯಾಗಲು ಇಚ್ಛಿಸುವುದಿಲ್ಲ. ಆ ವ್ಯಕ್ತಿಯು ಅಫಲಾತೂನನ ಉತ್ತರ ಕೇಳಿ ಹೇಳಿದನು. ನೀವು ಹೋಗಿ ಹೇಳಿರಿ. ಅವರು ಹೇಳಿದ್ದು ಸರಿಯಾಗಿದೆ. ಆದರೆ ನಾನು ನನ್ನ ಎಲ್ಲಾ ಅವಗುಣಗಳನ್ನು ತಿದ್ದಿಕೊಂಡಿದ್ದೇನೆ. ಆಗ ಅಫಲಾತೂನು ಹೇಳಿದನು. ಹೌದು ಇದು ಸಾಧ್ಯವಿದೆ. ಆದ್ದರಿಂದ ಅವನಿಗೆ ಒಳಗೆ ಕರೆಯಿಸಿ ಅತ್ಯಂತ ಗೌರವಯುತವಾಗಿ ಭೇಟಿ ಮಾಡಿದರು. ಗುಣಗಳನ್ನು ಮಾರ್ಪಾಟು ಮಾಡಲು ಸಾಧ್ಯವಿಲ್ಲ ಎನ್ನುವ ವಿದ್ವಾಂಸರ ಅಭಿಪ್ರಾಯ ತಪ್ಪಾಗಿರುತ್ತದೆ. ನಾವು ನೋಡುತ್ತಿರುತ್ತೇವೆ. ಕೆಲ ಸರಕಾರಿ ನೌಕರರು ಲಂಚ ತೆಗೆದುಕೊಳ್ಳುತ್ತಾರೆ. ಆದರೆ ಪಶ್ಚಾತ್ತಾಪಪಟ್ಟುಕೊಂಡ ನಂತರ ಯಾರಾದರೂ ಅವರಿಗೆ ಚಿನ್ನದ ಪರ್ವತವೇ ನೀಡಲು ಬಂದರೆ ನಿರಾಕರಿಸುತ್ತಾರೆ. **(ಮಲ್ಫೂಝಾತ್, ಸಂಪುಟ 1, ಪುಟ 117 ರಿಂದ 119 ಮುದ್ರಣ 2018 ಖಾದಿಯಾನ್)**

# ಜುಮುಅ ಖುತ್‌ಬ

**ನಾನು ಇಸ್ಲಾಮ್ ಧರ್ಮದಲ್ಲಿ ಇಂದಿನ ತನಕ ಯಾವ ಮಹಿಳೆಯ ಮಹರ್ ಉಮ್ಮು ಸಲೀಮರಿಗೆ ದೊರೆತ ಮಹರ್‌ಗಿಂತ ಗೌರವಾರ್ಹವಾಗಿ ಕಾಣಲಿಲ್ಲ.**

**ಹಝ್ರತ್ ತಲ್‌ಹ(ರ) ಜಿಹಾದ್ ಮಾಡುವಾಗ ಶಕ್ತಿ ಕಡಿಮೆಯಾಗದಿರಲಿ ಎಂದು ನಫ್ಲ್ ಉಪವಾಸ ನಿರ್ವಹಿಸುತ್ತಿರಲಿಲ್ಲ. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಅವರು ಕ್ರಮಬದ್ಧವಾಗಿ ಪ್ರತಿದಿನ ಉಪವಾಸ ನಿರ್ವಹಿಸುತ್ತಿದ್ದರು. ಈದುಲ್ ಫಿತರ್ ಮತ್ತು ಈದುಲ್ ಅಝ್‌ಹಾ ಹೊರತುಪಡಿಸಿ ಇತರ ದಿವಸಗಳಲ್ಲಿ.**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಅಬೂ ತಲ್‌ಹ ರಝಿಯಲ್ಲಾಹು ಅನ್ಹುರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ತಮ್ಮ ಹೊಣೆಗಾರಿಕೆಯನ್ನು ಬಹಳ ನಿಷ್ಠೆಯಿಂದ ನಿರ್ವಹಿಸುತ್ತಿದ್ದ ಅದೇ ರೀತಿ ಧಾರ್ಮಿಕ ಅಧ್ಯಾಯನದಲ್ಲಿ ಬಹಳ ಆಸಕ್ತಿ ಹೊಂದಿದ್ದ, ಮಾಜಿ ಸಹಾಯಕ ಪ್ರೈವೆಟ್ ಸೆಕ್ರೇಟರಿ(ರಬ್ವಾಹ್) ಆದ ಮಾನ್ಯ ಬಾಲು ಮುಹಮ್ಮದ್ ಲತೀಫ್ ಸಾಹೇಬ್ ಅವರ ಸದ್ಗುಣಗಳ ಪ್ರಸ್ತಾವನೆ ಮತ್ತು ಜುಮ್‌ಆ ನಮಾಝ್‌ನ ನಂತರ ಇವರಿಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31-01-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ- اَلرَّحْمٰنِ الرَّحِيْمِ- مٰلِكِ يَوْمِ الدِّيْنِ-

إِيَّاكَ نَعْبُدُ وَإِيَّاكَ نَسْتَعِيْنُ- اِهْدِنَا الصِّرَاطَ الْمُسْتَقِيْمَ-

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ-

ಇಂದು ನಾನು ಪ್ರಸ್ತಾಪಿಸಲಿರುವ ಸಹಾಬಿಯ ಹೆಸರು ಹಝ್ರತ್ ಅಬೂ ತಲ್‌ಹ(ರ). ಅವರ ಮೂಲ ಹೆಸರು ಝೈದ್ ಎಂದಾಗಿತ್ತು. ಅವರು ಅನ್‌ಸಾರ್‌ಗಳ ಖಝ್‌ರಜ್ ಗೋತ್ರಕ್ಕೆ ಸೇರಿದ್ದರು ಅವರು ಆ ಗೋತ್ರದ ಒಬ್ಬ ಮುಖಂಡರಾಗಿದ್ದರು. ಅವರು ತಮ್ಮ ಉಪನಾಮವಾದ ಅಬೂ ತಲ್‌ಹ ಎಂಬ ಹೆಸರಿನಲ್ಲಿ ಪ್ರಸಿದ್ಧರಾದರು. ಅವರು ತಂದೆಯ ಹೆಸರು ಸಹಲ್ ಬಿನ್ ಅಸ್ವದ್ ಮತ್ತು ತಾಯಿಯ ಹೆಸರು ಉಬಾದ ಬಿನ್ತ್ ಮಾಲಿಕ್ ಎಂದಾಗಿತ್ತು. ಹಝ್ರತ್ ಅಬು ತಲ್‌ಹ(ರ) ಅವರು ಬೈಅತ್ ಅಖಬ ಸಾನಿಯದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರ ಕೈ ಮೇಲೆ ಬೈಅತ್ ಮಾಡಿದ್ದರು. ಅವರು ಬದರ್ ಹಾಗೂ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಭಾಗವಹಿಸಿದ್ದರು. ಹಝ್ರತ್ ಅಬು ಉಬೈದ ಬಿನುಲ್ ಜರಹ್(ರ) ಅವರು ಹಿಜ್ರತ್ ಮಾಡಿ ಮದೀನಕ್ಕೆ ಬಂದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬು ತಲ್‌ಹ(ರ) ಅವರೊಂದಿಗೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಅವರು ಗೋಧಿ ಬಣ್ಣದವರೂ ಮಧ್ಯಮ ಎತ್ತರದವರೂ ಆಗಿದ್ದರು. ಅವರು ತನ್ನ ತಲೆಗೂದಲು ಮತ್ತು ಗಡ್ಡಕ್ಕೆ ಮೆಹಂದಿ ಎಂದೂ ಹಚ್ಚಿರಲಿಲ್ಲ. (ಅಸದುಲ್ ಗಾಬ, ಸಂಪುಟ-5, ಪುಟ-183, 184, ಅಬು ತಲ್‌ಹ ಅನ್ಸಾರಿ, ಸಂಪುಟ-2, ಪುಟ-150, ಝೈದ್ ಬಿನ್ ಸಹಲ್(ರ), ದಾರುಲ್ ಫಿಕರ್ ಬೈರೂತ್ ಲೆಬನಾನ್ 2003)

ಹಝ್ರತ್ ಅಬೂ ತಲ್‌ಹಾ ವಿವಾಹವಾಗುವ ಮೊದಲು ಅವರ ಪತ್ನಿಗೆ ತನ್ನ ಪ್ರಥಮ ಪತಿಯಿಂದ ಜನಿಸಿದ ಪುತ್ರನ ಹೆಸರು ಅನಸ್ ಎಂದಾಗಿತ್ತು. ಹಝ್ರತ್ ಉಮ್ಮು ಸುಲೇಮ್(ರ) ಅವರ ಪ್ರಥಮ ಪತಿ ಮಾಲಿಕ್ ಬಿನ್ ನಝುರ್ ಮೃತರಾದಾಗ ಹಝ್ರತ್ ಉಮ್ಮು ಸಲೀಮ್ ಹಝ್ರತ್ ಅಬೂ ತಲ್‌ಹರನ್ನು ವಿವಾಹವಾದರು. ಆ ದಂಪತಿಗಳಿಗೆ ಅಬ್ದುಲ್ಲಾ ಮತ್ತು ಉಮೈರ್ ಎಂಬ ಇಬ್ಬರು ಪುತ್ರರು ಜನಿಸಿದರು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್ ಸಂಪುಟ-2, ಪುಟ-124, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2010, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-383, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990, ಉಮ್‌ದತುಲ್ ಖಾರಿ ಶರಹ್ ಸಹೀಹ್ ಅಲ್‌ಬುಖಾರಿ, ಕಿತಾಬುಸ್ಸಲಾತ್ ಸಂಪುಟ-4, ಪುಟ-124, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಅನಸ್ ಹೇಳುತ್ತಾರೆ: ಹಝ್ರತ್ ಅಬೂ ತಲ್‌ಹಾ ಹಝ್ರತ್ ಉಮ್ಮು ಸುಲೇಮ್‌ರಿಗೆ ವಿವಾಹದ ಬಗ್ಗೆ ಸಂದೇಶ ಕಳುಹಿಸಿದಾಗ ಉಮ್ಮು ಸುಲೇಮ್ ಹೇಳಿದರು, ಅಲ್ಲಾಹನಾಣೆ ನಾನು ನಿಮ್ಮಂತಹ ವ್ಯಕ್ತಿಯ ವಿವಾಹದ ಪ್ರಸ್ತಾಪ ನಿರಾಕರಿಸುತ್ತಿರಲಿಲ್ಲ. ಆದರೆ ತಾವು ಬಹುದೇವಾರಾಧಕ (ಮುಶ್ರಿಕ್) ಆಗಿರುವಿರಿ. ನಾನು ಮುಸ್ಲಿಮಳಾಗಿರುವೆ. ತಮ್ಮೊಂದಿಗೆ ವಿವಾಹವಾಗುವುದು ನನಗೆ ಧರ್ಮಬದ್ಧವಲ್ಲ. ನೀವು ಇಸ್ಲಾಮ್ ಧರ್ಮ ಸ್ವೀಕರಿಸುವುದಾದರೆ ಅದನ್ನು ನಾನು ನನ್ನ ಮಹರ್ ಎಂದು ಗಣಿಸುವೆನು ಅದರ ಹೊರತು ಬೇರೆ ಏನನ್ನೂ ಆವಶ್ಯಪಡುವುದಿಲ್ಲ. ಹಾಗೆ ಅಬೂ ತಲ್‌ಹಾ ಇಸ್ಲಾಮ್ ಸ್ವೀಕರಿಸಿದರು ಇದು ಅವರ ಕಡೆಯಿಂದ ಮೆಹರ್ ಆಗಿ ಗಣಿಸಲಾಯಿತು. ಹಝ್ರತ್ ಸಾಬಿತ್ ರಝಿಯಲ್ಲಾಹು ಅನ್‌ಹು ಹೇಳುತ್ತಾ ಇದ್ದರು: ನಾನು ಇಸ್ಲಾಮ್ ಧರ್ಮದಲ್ಲಿ ಇಂದಿನ ತನಕ ಯಾವ ಮಹಿಳೆಯ ಮಹರ್ ಸಹ ಉಮ್ಮು ಸಲೀಮರಿಗೆ ದೊರೆತ ಮಹರ್‌ಗಿಂತ ಗೌರವಾರ್ಹವಾಗಿ ಕಾಣಲಿಲ್ಲ. (ಸನನ್ ನಿಸಾಯಿ ಕಿತಾಬುನ್ನಿಕಾಹ್ ಬಾಬುತ್ತರ್‌ವೇಜ್ ಅಲಲ್ ಇಸ್ಲಾಮ್ ಹದೀಸ್-3341)

ಹಝ್ರತ್ ಅಬೂ ತಲ್‌ಹಾ(ರ) ಬದರ್ ಯುದ್ಧದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದ್ದರು. ಅವರು ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್ ಯುದ್ಧದ ಸಂದರ್ಭದಲ್ಲಿ ಖುರೈಶಿಗಳ ಪ್ರಮುಖರಾದ 24 ಜನರ ಬಗ್ಗೆ ಆಜ್ಞಾಪಿಸಿದರು, ಅವರ ಮೃತ ಶರೀರಗಳನ್ನು ಒಂದು ಕೊಳಕು ಬಾವಿಯೊಳಗೆ ಹಾಕಿರಿ ಎಂದು. ಹಾಗೆ ಹಾಕಲಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದೇ ಯುದ್ಧದಲ್ಲಿ ಜಯಗಳಿಸಿದಾಗ ರಣಾಂಗಣದಲ್ಲಿ ಮೂರು ರಾತ್ರಿ ವಾಸಿಸುತ್ತಿದ್ದರು. ಬದರ್‌ನಲ್ಲಿ ಸಹ ಹಾಗೆ ತಂಗಿ ಮೂರನೆಯ ದಿವಸ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಸಂಗಡಿಗರನ್ನು, ಒಂಟೆಗಳನ್ನು ಹಿಂದಿರುಗಲು ಸಿದ್ಧಗೊಳಿಸಲು ಆಜ್ಞಾಪಿಸಿದರು ಒಂಟೆಗಳನ್ನು ಸಿದ್ಧಗೊಳಿಸಿದ ನಂತರ ಅಲ್ಲಿಂದ ಹೊರಟರು. ಅವರ ಸಹಾಬರು ಸಹ ಅವರ ಜೊತೆಗೆ ಹೊರಟರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದೋ ಉದ್ದೇಶದಿಂದ ಹೊರಟಿರುವರೆಂದು ಸಹಾಬರು ಯೋಚಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 24

ಜನರ ಶವಗಳನ್ನು ಹಾಕಿದ ಬಾವಿಯ ಸುತ್ತು ಗೋಡೆಯ ಸಮೀಪ ನಿಂತು ಮೃತರ ಮತ್ತು ಅವರ ತಂದೆಯ ಹೆಸರುಗಳನ್ನು ಹೇಳಿ ಕರೆಯಲು ತೊಡಗಿದರು. ಇಂತಿಂತಹ ವ್ಯಕ್ತಿಯ ಪುತ್ರನೇ, ಇಂತಿಂತಹ ವ್ಯಕ್ತಿಯ ಪುತ್ರನೇ ಎಂದು ಕರೆದು ಹೇಳಲು ತೊಡಗಿದರು: ಈಗ ನಿಮಗೆ ತೋಚುವುದಿಲ್ಲವೇ ನೀವು ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಅನುಸರಣೆ ಮಾಡಿದ್ದರೆ ಚೆನ್ನಾಗಿತ್ತು ಎಂದು. ಏಕೆಂದರೆ ನಮ್ಮ ಪ್ರಭು ನಮಗೆ ವಾಗ್ದಾನ ಮಾಡಿದುದನ್ನು ನಾವು ವಾಸ್ತವಿಕವಾಗಿ ಗಳಿಸಿದೆವು. ನಿಮ್ಮ ಪ್ರಭು ನಿಮಗೆ ವಾಗ್ದಾನ ಮಾಡಿದುದನ್ನು ನೀವು ಗಳಿಸಿರುವಿರೋ? ಹಝ್ರತ್ ಅಬೂ ತಲ್‌ಹ ಹೇಳುತ್ತಾರೆ: ಹಝ್ರತ್ ಉಮರ್(ರ) ಆಗ ಹೇಳಿದರು: ಯಾ ರಸೂಲುಲ್ಲಾಹ್, ನೀವು ಜೀವರಹಿತವಾಗಿರುವ ಆ ಶವಗಳ ಜೊತೆಗೆ ಏನು ಮಾತನಾಡುತ್ತಿರುವಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮುಹಮ್ಮದನ ಪ್ರಾಣ ಯಾರ ಕೈಯಲ್ಲಿದೆಯೋ ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ, ನಾನು ಹೇಳುವ ಮಾತುಗಳನ್ನು ನೀವು ಅವರಿಗಿಂತ ಹೆಚ್ಚಾಗಿ ಆಲಿಸುವುದಿಲ್ಲ. ಎಂದರೆ ಅಲ್ಲಾಹನು ಅವರಿಗೆ ಈ ಮಾತುಗಳನ್ನು ತಲಪಿಸುತ್ತಿದ್ದಾನೆ. ನಿಮ್ಮ ಅಂತಿಮ ಗತಿ ಕೆಟ್ಟಿತು ಎಂದು. (ಸಹೀಹ್ ಅಲ್‌ಬುಖಾರಿ ಕಿತಾಬುಲ್ ಮಗಾಝಿ ಹದೀಸ್–3976)

ಹಝ್ರತ್ ಅನಸ್ ಹೇಳುತ್ತಾರೆ: ಉಹುದ್ ಯುದ್ಧದಲ್ಲಿ ಜನರು ಸೋತು ಹೋದಾಗ ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ದೂರ ಸರಿದು ಹೋದರು. ಆಗ ಹಝ್ರತ್ ಅಬೂ ತಲ್‌ಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಎದುರಿಗೆ ಅಡ್ಡವಾಗಿ ನಿಂತರು. ಹಝ್ರತ್ ತಲ್‌ಹ ನಿಷ್ಣಾತ ಬಿಲ್ಲುಗಾರರಾಗಿದ್ದರು. ಅವರು ಆ ದಿನ ಎರಡು ಮೂರು ಬಿಲ್ಲುಗಳನ್ನು ಮುರಿದು ಹಾಕಿದರು. ಯಾರಾದರೂ ಬಾಣಗಳನ್ನು ತುಂಬಿದ ತೂಗು ಚೀಲದೊಂದಿಗೆ ದಾಟಿ ಹೋಗುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಿದ್ದರು ಅದನ್ನು ಅಬೂ ತಲ್‌ಹರಿಗೆ ಕೊಡಿರಿ ಎಂದು. ಹಝ್ರತ್ ಅನಸ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಲೆಎತ್ತಿ ಜನರನ್ನು ನೋಡುವಾಗ ಹಝ್ರತ್ ಅಬೂ ತಲ್‌ಹ ಹೇಳುತ್ತಿದ್ದರು: **ಬಿಅಬಿ ಅನ್‌ತ ವ ಉಮ್ಮಿ ಯಾ ರಸೂಲಲ್ಲಾಹ್. ಲ ಯುಸೀಬುಕ ಅಹ್‌ಮುನ್, ನಹ್‌ರಿ ದೂನ ನಹ್‌ರಿಕ** ನನ್ನ ತಂದೆ ತಾಯಂದಿರು ತಮಗೋಸ್ಕರ ಬಲಿಯಾಗಲಿ. ನೀವು ತಲೆ ಎತ್ತಿ ನೋಡಬೇಡಿರಿ. ಶತ್ರುಗಳ ಯಾವುದಾದರೂ ಬಾಣ ತಮಗೆ ತಗಲುವಂತಾಗದಿರಲಿ. ನನ್ನ ಎದೆ ತಮ್ಮ ಎದೆಯ ಮುಂದೆ ಅಡ್ಡವಾಗಿ ಇದೆ. (ಸಹೀಹ್ ಅಲ್‌ಬುಖಾರಿ ಕಿತಾಬುಲ್ ಮಗಾಝಿ, ಹದೀಸ್–4064, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–384–385, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಹಝ್ರತ್ ಅಬೂ ತಲ್‌ಹಾ(ರ) ಅವರು ಒಂದೇ ಗುರಾಣಿಯಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂರಕ್ಷಿಸುತ್ತಿದ್ದರು ಮತ್ತು ಅವರು ಅತ್ಯುತ್ತನ ಬಿಲ್ಲುಗಾರರಾಗಿದ್ದರು. ಅವರು ಬಾಣ ಹೂಡಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ತಲ್‌ಹಾರ ಬಾಣ ಎಲ್ಲಿಗೆ ತಗಲಿತು ಎಂದು ನೋಡುತ್ತಿದ್ದರು ಇದು ಬುಖಾರಿ ಗ್ರಂಥದ ಹದೀಸ್ ಆಗಿದೆ. (ಸಹೀಹ್ ಅಲ್ ಬುಖಾರಿ ಕಿತಾಬುಲ್ ಜಿಹಾದ್ ಹದೀಸ್–2902)

ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಅಬೂ ತಲ್‌ಹಾ ಈ ಪದ್ಯ ಹಾಡುತ್ತಿದ್ದ ಬಗ್ಗೆ ವರದಿಯಾಗಿದೆ:

**ವಜ್‌ಹೀ ಲಿವಜ್‌ಹಿಕಲ್ ವಖಾ, ವನಫ್‌ಸೀ ಲಿನಫ್‌ಸಿಕಲ್ ಫಿದಾ**

ನನ್ನ ಮುಖ ನಿಮ್ಮ ಮುಖ ಚಹರೆ ರಕ್ಷಿಸಲಿಕ್ಕೋಸ್ಕರವಾಗಿದೆ. ನನ್ನ ಜೀವ ನಿಮ್ಮ ಜೀವಕ್ಕೋಸ್ಕರ ಬಲಿಯಾಗಿದೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–4, ಹದೀಸ್–13781, ಆಲಿಮುಲ್ ಕುತುಬ್ ಬೈರೂತ್ ಲೆಬನಾನ್ 1998)

ಹಝ್ರತ್ ಅನಸ್ ಬಿನ್ ಮಾಲಿಕ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ತಲ್‌ಹ ಅವರನ್ನು ಉದ್ದೇಶಿಸಿ ಹೇಳಿದರು ತಮ್ಮ ಹುಡುಗರಲ್ಲಿ ಯಾರನ್ನಾದರು ಒಬ್ಬನನ್ನು ಹುಡುಕಿಕೊಡಿ. ನಾನು ಖೈಬರ್‌ಗೆ ಪ್ರವಾಸ ಕೈಗೊಂಡಾಗ ಅವನು ನನ್ನೊಂದಿಗೆ ನನ್ನ ಸಹಾಯಕನನ್ನಾಗಿರುವನು. ಹಝ್ರತ್ ಅಬೂ ತಲ್‌ಹಾ(ರ) ನನಗೆ ಅಂದರೆ ಅನಸ್ ಬಿನ್ ಮಾಲಿಕ್‌ರನ್ನು ಕರೆದುಕೊಂಡು ಹೋದರು. ಹಝ್ರತ್ ಅನಸ್ ಹೇಳುತ್ತಾರೆ ನಾನು ಆ ಕಾಲದಲ್ಲಿ ಯೌವನಾವಸ್ಥೆಯಲ್ಲಿದ್ದೆ. ನಾನು ಅವರು ಬಾಣ ಹೂಡಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ತಲ್‌ಹಾರ ಬಾಣ ಎಲ್ಲಿಗೆ ತಗಲಿತು ಎಂದು ನೋಡುತ್ತಿದ್ದರು. ಎಲ್ಲಾದರು ತಮ್ಮ ಸವಾರಿಯಿಂದ ಇಳಿಯುವಾಗ ಸಾಮಾನ್ಯವಾಗಿ ಈ ದುಆ ಮಾಡುತ್ತಿದ್ದರು **ಅಲ್ಲಾಹುಮ್ಮ ಇನ್ನಿ ಅಊಝುಬಿಕ ಮಿನಲ್‌ಹಮ್ಮಿ ವಲ್‌ಹಝುನೆ ವಲ್‌ಅಜ್ಝಿ ವಲ್‌ಕಸಲೆ ವಲ್ ಬುಖ್ಲೆ ವಲ್‌ಜಿನ್ನೆ ವಲ್ ಝಲಇದ್ದೈನೆ ವಗಲಬತಿರ್ರಿಜಾಲೆ** ಓ ನನ್ನ ಅಲ್ಲಾಹನೇ! ನಾನು ನಿನ್ನ ರಕ್ಷಣೆ ಯಾಚಿಸುತ್ತೇನೆ ಪ್ರತಿಯೊಂದು ದುಃಖಗಳಿಂದ, ಸಂಕಷ್ಟಗಳಿಂದ, ಸೋಮಾರಿತನದಿಂದ, ಜಿಪುಣತನದಿಂದ, ಸಾಲ ಎಂಬ ಭರದಿಂದ ಹಾಗೂ ಜನರ ಸಂಕಷ್ಟಗಳಿಂದ. (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್, ಹದೀಸ್–2893)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಆಗಮಿಸಿದಾಗ ಅವರಿಗೆ ಪರಿಚಾರಕರಾಗಿ ಯಾರೂ ಇರಲಿಲ್ಲ. ಹಝ್ರತ್ ಅಬೂ ತಲ್‌ಹಾ ನನ್ನ ಕೈ ಹಿಡಿದುಕೊಂಡು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋಗಿ ಹೇಳಿದರು: ಯಾ ರಸೂಲುಲ್ಲಾಹ್ ಅನಸ್ ತಿಳುವಳಿಕೆಯುಳ್ಳ ಬಾಲಕನಾಗಿದ್ದಾನೆ. ಅವನು ತಮ್ಮ ಸೇವೆ ಮಾಡುವನು. ಹಝ್ರತ್ ಅನಸ್ ಹೇಳುತ್ತಾರೆ: ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರು ಪ್ರಯಾಣದಲ್ಲಿರುವಾಗಲೂ ಅವರು ಮನೆಯಲ್ಲಿರುವಾಗಲೂ ಸೇವೆ ಸಲ್ಲಿಸುತ್ತಿದ್ದೆ. ನಾನು ಯಾವ ಕೆಲಸ ಮಾಡಿದರು ಅವರು ಎಂದೂ ನನಗೆ ನೀನು ಈ ಕೆಲಸ ಹೀಗೆ ಮಾಡಿದೆ ಅಥವಾ ಸರಿಯಾಗಿ ಮಾಡಲಿಲ್ಲ ಎಂದೂ ಹೇಳಲಿಲ್ಲ ಅಂದರೆ ಅವರು ಎಂದೂ ತಡೆಗಟ್ಟಲಿಲ್ಲ. (ಸಹೀಹ್ ಬುಖಾರಿ ಕಿತಾಬುಲ್ ವಸಾಯ, ಹದೀಸ್–2768)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನ ಮತ್ತು ಮಕ್ಕದ ಮಧ್ಯವಿರುವ ಉಸ್‌ಫಾನ್‌ನಿಂದ ಮರಳಿ ಬರುವಾಗ ನಾವು ಅವರ ಜೊತೆಗಿದ್ದೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂಟೆಯ ಮೇಲಿದ್ದರು ಮತ್ತು ತಮ್ಮ ಪತ್ನಿ ಸಫಿಯರನ್ನು ತನ್ನ ಹಿಂದೆ ಕುಳ್ಳಿರಿಸಿದ್ದರು. ಅವರ ಒಂಟೆ ಮುಗ್ಗರಿಸಿದಾಗ ಅವರಿಬ್ಬರೂ ಒಂಟೆಯ ಮೇಲಿನಿಂದ ಕೆಳಗೆ ಬಿದ್ದರು. ಹಝ್ರತ್ ತಲ್‌ಹಾ ಕೂಡಲೇ ತನ್ನ ಒಂಟೆಯಿಂದ ಕೆಳಗೆ ನೆಗೆದು ಹೇಳಿದರು: ಯಾ ರಸೂಲುಲ್ಲಾಹ್ ನಾನು ತಮಗೋಸ್ಕರ ಬಲಿಯಾಗುತ್ತೇನೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಮೊದಲು ಮಹಿಳೆಯನ್ನು ಗಮನಿಸಿರಿ. ನಂತರ ಹಝ್ರತ್ ಅಬೂ ತಲ್‌ಹಾ(ರ) ಅವರ ತಮ್ಮ ಮುಖದ ಮೇಲೆ ಬಟ್ಟೆ ಧರಿಸಿಕೊಂಡು ಹಝ್ರತ್ ಸಫಿಯರ ಬಳಿ ಬಂದು ಅವರ ಮೇಲೆ ಬಟ್ಟೆಯನ್ನಿರಿಸಿದರು ಅಂದರೆ ಅವರಿಗೆ ಪರದೆಯ ಬಗ್ಗೆ ಬಹಳ ಕಾಳಜಿ ಇತ್ತು. ಅನಂತರ ಅವರು ಇಬ್ಬರ ಸವಾರಿ ಮೃಗವನ್ನು ಸರಿಪಡಿಸಿದರು. ಅವರಿಬ್ಬರು ಅದರ ಮೇಲೆ ಸವಾರಿ ಮಾಡಿದರು. ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮೀಪವಾಗಿ ಸವಾರಿ ಮಾಡುತ್ತಾ ಹೋದೆವು ಮತ್ತು ಮದೀನಕ್ಕೆ ಸಮೀಪವಾಗುತ್ತಿರುವಾಗ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಡಿದರು: **ಅಇಬೂನ ತಾಯಿಬೂನ ಆಬಿದೂನ ಲಿರಬ್ಬಿನಾ ಹಾಮಿದೂನ**– ಅಂದರೆ ನಾವು ಹಿಂದಿರುಗಿ ಬರುವವರು, ನಾವು ನಮ್ಮ ಪ್ರಭುವಿನಲ್ಲಿ ತೌಬ ಮಾಡುವವರು, ನಾವು ನಮ್ಮ ಪ್ರಭುವಿನ ಅರಾಧನೆ ಮಾಡುವವರು ಹಾಗೂ ನಮ್ಮ ಪ್ರಭುವನ್ನು ಹೊಗಳುವವರಾಗಿದ್ದೇವೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಪ್ರವೇಶಿಸುನ ತನಕ ಈ ಪದಗಳನ್ನೇ ಉಚ್ಚರಿಸುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್, ಹದೀಸ್–3085, ಲುಗಾತುಲ್ ಹದೀಸ್, ಸಂಪುಟ–3, ಪುಟ–172 ಲಾಹೋರ್ 2005)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಅವರು ಈ ಘಟನೆಯ ಬಗ್ಗೆ ಹೇಳುತ್ತಾರೆ: "ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖೈಬರ್ ಯುದ್ಧದಿಂದ ಹಿಂದಿರುಗುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧರ್ಮಪತ್ನಿ ಹಝ್ರತ್ ಸಫಿಯಾ(ರ) ಅವರು ಸಹ ಜೊತೆಗಿದ್ದರು. ದಾರಿಯಲ್ಲಿ ಅವರ ಒಂಟೆ ಮುಗ್ಗರಿಸಿದಾಗ ಅವರಿಬ್ಬರು ಆ ಒಂಟೆಯಿಂದ ಕೆಳಗೆ ಬಿದ್ದರು. ಹಝ್ರತ್ ಅಬೂ ತಲ್‌ಹ(ರ) ಅವರ ಒಂಟೆ ಅವರಿಬ್ಬರ ಹಿಂದೆ ಇತ್ತು ಅವರು ಕೂಡಲೇ ತನ್ನ ಒಂಟೆಯಿಂದ ಕೆಳಗೆ ನೆಗೆದು ಹೇಳಿದರು: ಯಾ ರಸೂಲುಲ್ಲಾಹ್ ನಾನು ತಮಗೋಸ್ಕರ ಬಲಿಯಾಗುತ್ತೇನೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಮೊದಲು ಮಹಿಳೆಯನ್ನು ಗಮನಸಿರಿ, ಮೊದಲು ಮಹಿಳೆಯರನ್ನು ಗಮನಿಸಿರಿ ಎಂದು ಎರಡು ಬಾರಿ ಹೇಳಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ ಹಝ್ರುತ್ ಅಬೂ ತಲ್‌ಹಾ(ರ) ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮಿ ಆಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವನದ ಪ್ರಶ್ನೆ ಇದ್ದಾಗ ಅವರಿಗೆ ಯಾರು ಕಾಣಲಿಲ್ಲ ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ

ಹೇಳಿದರು ಮೊದಲು ಮಹಿಳೆಯರನ್ನು ಗಮನಿಸಿರಿ.” (ಉಸ್ವಾಯೆ ಹಸನ, ಅನ್ವಾರುಲ್ ಉಲೂಮ್ ಸಂಪುಟ–17, ಪುಟ–126–127)

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಮಹಿಳೆಯರ ಹಕ್ಕಿನ ಬಗ್ಗೆ ಪ್ರಸ್ತಾಪಿಸುವಾಗ ಈ ಘಟನೆಯನ್ನು ಪ್ರಸ್ತಾಪಿಸಿದರು. ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖೈಬರನ್ನು ಆಕ್ರಮಿಸಿದಾಗ ನಾವು ಖೈಬರ್ ಸಮೀಪ ಸುಬ್ಹ್ ನಮಾಝ್ ನಿರ್ವಹಿಸಿದೆವು. ಆಗ ಇನ್ನೂ ಕತ್ತಲೆ ದೂರ ಸರಿದಿರಲಿಲ್ಲ. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಯಾಣ ಮುಂದುವರಿಸಿದರು. ಹಝ್ರತ್ ತಲ್ಹ ಸಹ ಸವಾರಿ ಮಾಡಿದರು. ನಾನು ಹಝ್ರತ್ ತಲ್ಹಾರ ಜೊತೆಗೆ ಅವರ ಹಿಂದೆ ಕುಳಿತಿದ್ದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖೈಬರ್‌ನ ರಸ್ತೆಗಳಲ್ಲಿ ತಮ್ಮ ಕುದುರೆಯನ್ನು ಓಡಿಸಿದರು ನಾನು ಹುಝೂರ್(ಸ) ಅವರ ಎಷ್ಟು ಸಮೀಪದಲ್ಲಿದ್ದೆ ಎಂದರೆ ನನ್ನ ಮೊಣಕಾಲು ಹುಝೂರ್(ಸ) ಅವರ ತೊಡೆಗೆ ತಾಗುತ್ತಿತ್ತು. ತದನಂತರ ನಬಿ(ಸ) ಬೇಸಿಗೆ ಕಾಲದ ಕಾರಣ ತಮ್ಮ ಬಟ್ಟೆಯನ್ನು ತಮ್ಮ ತೊಡೆಯ ತನಕ ಎತ್ತಿಕೊಂಡರು ಎಲ್ಲಿಯ ತನಕ ಎಂದರೆ ನನಗೆ ಅವರ ತೊಡೆಯ ಬಿಳಿಬಾಗ ಕಾಣುತ್ತಿತ್ತು. ಇಲ್ಲಿ ತೊಡೆ ಎಂದರೆ ಮೊಣಕಾಲಿನಿಂದ ಮೇಲಿನ ಭಾಗ ಆಗಿದೆ. ನಾವು ಪಟ್ಟಣಕ್ಕೆ ಪ್ರವೇಶಿಸಿದೆವು ಅನಂತರ ಹೇಳಿದರು **ಅಲ್ಲಾಹು ಅಕ್‌ಬರ್ ಖರಿಬತ್ ಖೈಬರು ಇನ್ನಾ ಇಝಾ ನಝುಲ್‌ನಾ ಬಿಸಾಹತಿ ಖೌಮಿನ್ ಫಸಾಅ ಸಬಾಹುಲ್ ಮುನ್‌ಝಿರೀನ್.** ಅಲ್ಲಾಹನು ಎಲ್ಲದಕ್ಕಿಂತ ದೊಡ್ಡವನಾಗಿದ್ದಾನೆ. ಖೈಬರ್ ಹಾಳುಬಿದ್ದಿದೆ. ನಾವು ಯಾವುದಾದರು ಜನಾಂಗದ ಆವರಣದಲ್ಲಿ ತಂಗಿದರೆ ಅವರ ಮುಂಜಾನೆಯು ಬಹಳ ಕೆಟ್ಟದಾಗಿರುತ್ತದೆ. ಅವರಿಗೆ ಮೊದಲೇ ಅಲ್ಲಾಹನ ಶಾಪದ ಬಗ್ಗೆ ತಿಳಿಸಲಾಗಿರುತ್ತದೆ.

ಹೀಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೂರು ಸಲ ಹೇಳಿದರು.

ಹಝ್ರತ್ ಅನಸ್ ಹೇಳುತ್ತಿದ್ದರು ಜನರು ತಮ್ಮ ಕೆಲಸ ಕಾರ್ಯಕ್ಕಾಗಿ ಹೊರಗೆ ಬಂದಾಗ ಅವರು ಹೇಳಿದರು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್. ಅಬ್ದುಲ್ ಅಝೀಝ್ ಹೇಳುತ್ತಿದ್ದರು ನಮ್ಮ ಕೆಲವು ಸಂಗಡಿಗರು ಮುಹಮ್ಮದ್(ಸ) ಅವರೊಂದಿಗೆ ಖಮೀಸ್ ಎಂಬ ಪದ ಹೇಳಿದ್ದರು ಎಂದು ಅಂದರೆ ಸೈನ್ಯ. ಹಝ್ರತ್ ಅನಸ್(ರ) ಹೇಳುತ್ತಾರೆ ನಾವು ಅದನ್ನು ಹೋರಾಡಿ ಪಡೆದಿರುವೆವು. ಖೈದಿಗಳನ್ನು ಒಗ್ಗೂಡಿಸುವಾಗ ಹಝ್ರತ್ ದಹಿಯ್ಯ ಖಲ್‌ಬಿ(ರ) ಬಂದು ಹೇಳಿದರು: ಎಲೈ ಅಲ್ಲಾಹನ ಸಂದೇಶವಾಹಕರೇ! ನನಗೆ ಆ ಖೈದಿಗಳಿಂದ ಒಂದು ದಾಸಿಯನ್ನು ನೀಡಿರಿ. ಹುಝೂರ್(ಸ) ಹೇಳಿದರು ಹೋಗಿ ಒಂದು ಹುಡುಗಿಯನ್ನು ಪಡೆದುಕೊಳ್ಳಿರಿ ಎಂದರು. ಅವರು ಅಲ್ಲಿಗೆ ಹೋಗಿ ಸುಫಿಯಾರನ್ನು ತೆಗೆದು ಕೊಂಡರು ಅದಕ್ಕೆ ಓರ್ವ ವ್ಯಕ್ತಿ ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರ ಬಳಿ ಬಂದು ಹೇಳಿದನು; ಯಾ ರಸೂಲಲ್ಲಾಹ್! ನೀವು ದಹಿಯ್ಯರಿಗೆ ಖರೀಝ್ ಮತ್ತು ನಝೀರಿನ ಮುಖಂಡನ ಪುತ್ರಿ ಸಫಿಯ ಬಿನ್ತ್ ಹೈಯರನ್ನು ನೀಡಿದ್ದೀರಿ. ಅವರು ನಿಮಗೆ ಯೋಗ್ಯರಾಗಿದ್ದಾರೆ. ಅದಕ್ಕೆ ಹುಝೂರ್(ಸ) ಅವರು ದಹಿಯ್ಯ ಹಾಗೂ ಸಫಿಯ ಅವರನ್ನು ಕರೆಸಿದರು. ಅವರಿಬ್ಬರು ಬಂದಾಗ ಹುಝೂರ್(ಸ) ಹೇಳಿದರು ದಹಿಯ್ಯ ನೀವು ಅನ್ಯ ಖೈದಿಗಳಿಂದ ಬೇರೆಯವರನ್ನು ಪಡೆದುಕೊಳ್ಳಿರಿ ಎಂದರು. ಹಝ್ರತ್ ಅನಸ್(ರ) ಹೇಳುತ್ತಾರೆ ಪ್ರವಾದಿ(ಸ) ಅವರು ಹಝ್ರತ್ ಸಫಿಯ(ರ) ಅವರನ್ನು ಸ್ವತಂತ್ರಗೊಳಿಸಿದ ನಂತರ ಅವರನ್ನು ವಿವಾಹವಾದರು. ಇದಕ್ಕೆ ಹಝ್ರತ್ ಸಾಬಿತ್(ರ) ಅವರು ಹಝ್ರತ್ ಅನಸ್(ರ) ಅವರಿಗೆ ಕೇಳಿದರು ಅಬು ಹಮ್ಝ!! ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಮಹರ್‌ಗಾಗಿ(ವಧುದಕ್ಷಣೆ) ಏನು ನೀಡಿದರು? ಅವರು ಉತ್ತರಿಸಿದರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಸ್ವತಂತ್ರಗೊಳಿಸಿದ್ದರು ಮತ್ತು ಅವರೊಂದಿಗೆ ವಿವಾಹವಾದರು. ಅವರಿಗೆ ಸ್ವತಂತ್ರಗೊಳಿಸಿದ್ದನ್ನೆ ಮಹರ್ ಆಗಿತ್ತು. ಕೊನೆಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇನ್ನು ರಸ್ತೆಯಲ್ಲಿದ್ದಾಗ ಹಝ್ರತ್ ಉಮ್ಮೆ ಸುಲೇಮ್(ರ) ಅವರು ಹಝ್ರತ್ ಸಫಿಯ(ರ) ಅವರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಅಲಂಕರಿಸಿದರು. ಅನಂತರ ಅಲ್ಲಿ ಅವರ ಮದುವೆ ಆಯಿತು. ಮಾರನೆಯ ದಿವಸ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು; ಯಾರ ಬಳಿ ಏನೇನಿದೆಯೋ ಅವುಗಳನ್ನು ತೆಗೆದುಕೊಂಡು ಬನ್ನಿ ಎಂದರು. ಎಲ್ಲಾ ಜನರು ತಮ್ಮ ಬಳಿ ಇದ್ದದ್ದನ್ನೆಲ್ಲ ತಂದರು ಅವುಗಳನ್ನೆಲ್ಲ ಒಟ್ಟು ಗೂಡಿಸಲಾಯಿತು ಹೀಗೆ ಇದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಲೀಮದ ಔತಣವಾಗಿತ್ತು. (ಸಹೀಹ್ ಬುಖಾರಿ, ಕಿತಬುಸ್ಸಲಾತ್, ಹದೀಸ್–371)

ಇನ್ನೊಂದು ವರದಿ ಹೀಗಿದೆ: ಕೋಟೆಯನ್ನು ಜಯಗೊಳಿಸಿದ ನಂತರ ಹಝ್ರತ್ ಸಫಿಯ(ರ) ದಹಿಯ್ಯ(ರ) ಅವರ ಭಾಗದಲ್ಲಿ ಬಂದರು. ಅನೇಕ ಸಹಾಬರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹಝ್ರತ್ ಸಫಿಯ(ರ) ಅವರ ಒಳಿತನ್ನು ವ್ಯಕ್ತಪಡಿಸಿ ಹೇಳಿದರು ಹಝ್ರತ್ ಸುಫಿಯ(ರ) ಅವರು ಉನ್ನತ ಸ್ಥಾನದವರಾಗಿದ್ದಾರೆ ಆದ್ದರಿಂದ ತಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ವಿವಹವಾದರೆ ಯತ್ತಮ ಎಂದರು. ಹೀಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ದಹಿಯ್ಯ(ರ) ಅವರ ಬಳಿ ತಮ್ಮ ಸಂದೇಶ ಕಳುಹಿಸಿದರು ಮತ್ತು ಹುಝೂರ್(ಸ) ಅವರು ಏಳು ಗುಲಾಮರ ಬದಲು ಹಝ್ರತ್ ಸುಫಿಯ ಅವರನ್ನು ಸ್ವತಂತ್ರಗೊಳಿಸಿ ಅವರನ್ನು ಹಝ್ರತ್ ಉಮ್ಮೆ ಸುಲೇಮ್ ಅವರ ಬಳಿ ಕಳುಹಿಸಿದರು. ಅನಂತರ ಹುಝೂರ್(ಸ) ಅವರು ಹಝ್ರತ್ ಸುಫಿಯ ಅವರೊಂದಿಗೆ ವಿವಾಹವಾದರು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–8, ಪುಟ–97–98, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹುನೈನ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯುದ್ಧದಲ್ಲಿ ಒಬ್ಬ ಮುಸ್ಲಿಮ್ ಒಬ್ಬ ಅವಿಶ್ವಾಸಿಯನ್ನು ಕೊಂದರೆ ಆ ಅವಿಶ್ವಾಸಿಯ ಎಲ್ಲಾ ಸಂಪತ್ತು ಮತ್ತು ಸಾಮಗ್ರಿಗಳು ಆ ಮುಸ್ಲಿಮನಿಗೆ ಕೊಡಲಾಗುವುದು. ಆ ದಿನ ಹಝ್ರತ್ ಅಬೂ ತಲ್‌ಹ ಇಪ್ಪತ್ತು ಅವಿಶ್ವಾಸಿಗಳನ್ನು ಕೊಂದರು ಮತ್ತು ಅವರ ಸಾಮಗ್ರಿಗಳನ್ನು ವಶಪಡಿಸಿದರು. ಹಝ್ರತ್ ಅಬೂ ತಲ್‌ಹ ಹಝ್ರತ್ ಉಮ್ಮು ಸಲೀಮ್‌ರನ್ನು ನೋಡಿದಾಗ ಅವರ ಕೈಯಲ್ಲಿ ಒಂದು ಖಡ್ಗವಿತ್ತು. ಅದೇನೆಂದು ಕೇಳಿದಾಗ ಉಮ್ಮು ಸಲೀಮ್ ಹೇಳಿದರು: ಅಲ್ಲಾಹನಾಣೆ ಅವಿಶ್ವಾಸಿಗಳಲ್ಲಿ ಯಾರಾದರೂ ನನ್ನ ಸಮೀಪಕ್ಕೆ ಬಂದರೆ ನಾನು ಈ ಖಡ್ಗದಿಂದ ಅವನ ಹೊಟ್ಟೆಯನ್ನು ಸೀಳಿ ಹಾಕುವೆನು. ಹಝ್ರತ್ ತಲ್‌ಹ ಈ ವಿಷಯವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು. (ಸನನ್ ಅಬುದಾಊದ್, ಕಿತಬುಲ್ ಜಿಹಾದ್, ಹದೀಸ್–2718)

ಹಝ್ರತ್ ಅನಸ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಬೂ ತಲ್‌ಹರ ಧ್ವನಿ ಒಂದು ಗುಂಪಿನ ಜನರ ಧ್ವನಿಗಿಂತ ಉಚ್ಚವಾಗಿದೆ. ಕೆಲವು ವರದಿಗಳಲ್ಲಿ ನೂರು ಜನರ ಧ್ವನಿಗಿಂತ ಎಂದೂ ಒಂದು ಸಾವಿರ ಜನರ ಧ್ವನಿಗಿಂತ ಉಚ್ಚವಾಗಿತ್ತು ಎಂದೂ ಹೇಳಲಾಗಿದೆ. ಎಂದರೆ ಅವರ ಧ್ವನಿ ಬಹಳ ಉನ್ನತವಾಗಿತ್ತು. (ಮಸ್‌ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–4, ಪುಟ–286, ಹದೀಸ್–12119, ಆಲಿಮುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1998, ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಸಂಪುಟ–4, ಪುಟ–261, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ ಲೆಬನಾನ್ 2010, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–383, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅನಸ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿ ಹಝ್ರತ್ ತಲ್‌ಹ ಜಿಹಾದ್ ಮಾಡುವಾಗ ಶಕ್ತಿ ಕಡಿಮೆಯಾಗದಿರಲಿ ಎಂದು ನಫ್ಲ್ ಉಪವಾಸ ನಿರ್ವಹಿಸುತ್ತಿರಲಿಲ್ಲ. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಅವರು ಕ್ರಮಬದ್ಧವಾಗಿ ಪ್ರತಿದಿನ ಉಪವಾಸ ನಿರ್ವಹಿಸುತ್ತಿದ್ದರು. ಈದುಲ್ ಫಿತರ್ ಮತ್ತು ಈದುಲ್ ಅಝ್‌ಹಾ ಹೊರತುಪಡಿಸಿ ಇತರ ದಿವಸಗಳಲ್ಲಿ. (ಸಹೀಹ್ ಬುಖಾರಿ. ಕಿತಾಬುಲ್ ಜಿಹಾದ್ ಹದೀಸ್–2828)

ಹಝ್ರತ್ ಅಬೂ ತಲ್‌ಹಾರ ಅತಿಥಿ ಸತ್ಕಾರಕ್ಕೆ ಸಂಬಂಧಿಸಿದ ಒಂದು ಘಟನೆ ಹೀಗಿದೆ: ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಒಬ್ಬ ವ್ಯಕ್ತಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಈ ಅತಿಥಿಯನ್ನು ಯಾರು ಕರೆದುಕೊಂಡು ಹೋಗುವರು. ಹಝ್ರತ್ ತಲ್‌ಹ ಆ ಅತಿಥಿಯನ್ನು ತನ್ನ ಜೊತೆಗೆ ಕರೆದುಕೊಂಡು ಹೋದರು. ಅವರು ತನ್ನ ಪತ್ನಿಯೊಂದಿಗೆ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅತಿಥಿಯನ್ನು ಚೆನ್ನಾಗಿ ಸತ್ಕರಿಸಬೇಕು. ಪತ್ನಿ ಹೇಳಿದರು: ಇಲ್ಲಿ ನಮ್ಮ ಮಕ್ಕಳಿಗೆ ಕೊಡಲು ಸಾಕಾಗುವಷ್ಟು ಸ್ವಲ್ಪ ಆಹಾರ ಮಾತ್ರ ಇದೆ. ಬೇರೆ ಆಹಾರವೇನೂ ಇಲ್ಲ. ಅಬೂ ತಲ್‌ಹ ಹೇಳಿದರು: ಮಕ್ಕಳಿಗೆ ಆಹಾರ ನೀಡದೆ ನಿದ್ರಿಸುವಂತೆ ಮಾಡು. ಆಹಾರ ಸಿದ್ಧಪಡಿಸಿ ದೀಪ ಹೊತ್ತಿಸಲಾಯಿತು. ಮಕ್ಕಳನ್ನು ಬರಿ ಹೊಟ್ಟೆ ನಿದ್ರಿಸುವಂತೆ ಮಾಡಲಾಯಿತು. ಅನಂತರ ಅವರು ದೀಪ ದುರಸ್ತಿ ಮಾಡುವ ನೆಪದಲ್ಲಿ ದೀಪವನ್ನು ನಂದಿಸಿದರು. ಅನಂತರ ಪತಿ ಪತ್ನಿ ಅತಿಥಿಗೆ ತಾವು ಸಹ ಊಟ ಮಾಡುವ ಹಾಗೆ ಭಾವಿಸಲಿ ಎಂದು ನಟಿಸಿದರು. ಅವರಿಬ್ಬರು ಬರಿ ಹೊಟ್ಟೆ ನಿದ್ರಿಸಿದರು. ರಾತ್ರಿ ಕಳೆದು ಬೆಳಗ್ಗೆ

ಹಝ್ರತ್ ಅಬೂ ತಲ್ಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದಾಗ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಕಳೆದ ರಾತ್ರಿ ನೀವು ಮಾಡಿದ ಅತಿಥಿ ಸತ್ಕಾರದಿಂದ ಅಲ್ಲಾಹನು ಸಹ ನಕ್ಕುಬಿಟ್ಟನು. ಅಥವಾ ಅವರು ಹೇಳಿದರು: ನಿಮ್ಮಿಬ್ಬರ ವರ್ತನೆಯಿಂದ ಅಲ್ಲಾಹನು ಬಹಳ ಸಂತೋಷಗೊಂಡನು. ಅಲ್ಲಾಹನು ಹೀಗೆ ಸಂದೇಶವಾಣಿ ಅವತೀರ್ಣಗೊಳಿಸಿದನು: **ವ ಯುಅ್‌ಸಿರೂನ ಅಲಾ ಅನ್‌ಫುಸಿಹಿಮ್ ವಲೌಕಾನ ಬಿಹಿಮ್ ಖಸಾಸತುನ್. ವಮನ್ ಯೂಖ ಶುಹ್ಹ ನಫ್‌ಸಿಹೀ ಫಉಲಾಯಿಕ ಹುಮುಲ್ ಮುಫ್ಲಿಹೂನ್** – ತಮಗೆ ದಾರಿದ್ರ್ಯವಿದ್ದರೆ ಕೂಡ ಅವರು ತಮಗಿಂತ ಇತರರಿಗೆ ಆದ್ಯತೆ ನೀಡುತ್ತಾರೆ. ತಮ್ಮ ಮನಸ್ಸಿನ ಜಿಪುಣತೆಯಿಂದ ರಕ್ಷಿಸಲ್ಪಟ್ಟವರೇ ವಿಜಯಶಾಲಿಗಳು. (ಸಹೀಹ್ ಬುಖಾರಿ, ಕಿತಾಬುಲ್ ಮುನಾಖಿಬುಲ್ ಅನ್ಸಾರ್, ಹದೀಸ್–3798. ಉಮ್‌ದತುಲ್ ಖಾರಿ ಶರಹ್ ಸಹೀಹ್ ಬುಖಾರಿ ಕಿತಾಬುಲ್ ಮುನಾಖಿಬ್ ಸಂಪುಟ–16, ಪುಟ–364)

ಹಝ್ರತ್ ಅನಸ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಮ್ಮೆ ತಲೆಗೂದಲು ಕತ್ತರಿಸಿದಾಗ ಕತ್ತರಿಸಿದ ಕೂದಲಿನ ಒಂದು ಭಾಗ ತೆಗೆದಿರಿಸಿದ ಪ್ರಥಮ ವ್ಯಕ್ತಿ ಅಬೂ ತಲ್ಹ ಆಗಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ವಝು, ಹದೀಸ್–171)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಒಮ್ಮೆ ಹಝ್ರತ್ ಅಬೂತಲ್ಹ(ರ) ಅವರ ಹಝ್ರತ್ ಉಮ್ಮೆ ಸುಲೇಮರ ಬಳಿ ಬಂದು ಹೇಳಿದರು ನನಗೆ ಹುಝುರ್ ಸಲಲ್ಲಾಹು ಅಲೈಹಿವಸಲ್ಲವರ ಧ್ವನಿ ಬಹಳ ಹಗುರವಾಗಿ ಕೇಳಿಸಿತು. ನನಗೆ ತಿಳಿದು ಬರುವುದೇನೆಂದರೆ ಹುಝೂರ್(ಸ) ಅವರಿಗೆ ಹಸಿವಾಗಿರಬಹುದು. ನಿಮ್ಮ ಬಳಿ ಏನಾದರು ಇದೆಯೆ? ಎಂದು ಕೇಳಿದಾಗ ಹಝ್ರತ್ ಉಮ್ಮೆ ಸುಲೇಮರು ಹೇಳಿದರು ಹೌದು ಇದೆ ಎಂದು ಒಳಗೆ ಹೋಗಿ ಅವರ ಬಳಿ ಇದ್ದ ಜೋಳದ ರೊಟ್ಟಿಗಳಲ್ಲಿ ಕೆಲವನ್ನು ತೆಗೆದು ಕೊಂಡು ಬಂದು ಕೊಟ್ಟರು. ಅವಂತರ ಅವರು ತಮ್ಮ ಒಂದು ದುಪಟ್ಟದಲ್ಲಿ ಆ ರೊಟ್ಟಿಗಳನ್ನು ಕಟ್ಟಿ ನನಗೆ ಹುಝೂರ್(ಸ) ಅವರಿಗೆ ನೀಡಲು ಕಳುಹಿಸಿದರು. ನಾನು ಅಂದರೆ ಅನಸ್ ಬಿನ್ ಮಾಲಿಕ್ ಆ ರೊಟ್ಟಿಗಳನ್ನು ತೆಗೆದುಕೊಂಡು ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರ ಬಳಿ ಬಂದೆನು ಆಗ ಅವರು ತಮ್ಮ ಕೆಲವು ಸಹಾಬರೊಂದಿಗೆ ಮಸೀದಿಯಲ್ಲಿ ಕುಳಿತಿದ್ದರು ನಾನು ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರ ಬಳಿ ಹೋಗಿ ನಿಂತಿಕೊಂಡೆನು. ಆಗ ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರು ಕೇಳಿದರು ನಿನ್ನನ್ನು ಹಝ್ರತ್ ಅಬು ತಲ್ಹಾ ಕಳುಹಿಸಿದ್ದೋ? ಅದಕ್ಕೆ ನಾನು ಉತ್ತರಿಸಿದೆ ಹೌದು ಯಾ ರಸೂಲಲ್ಲಾಹ್. ಮತ್ತೆ ಕೇಳಿದರು ನಿನ್ನೊಂದಿಗೆ ಊಟ ಕಳುಹಿಸಿದ್ದಾರೆಯೇ? ಅದಕ್ಕೆ ನಾನು ಹೌದು ಎಂದು ಉತ್ತರಿಸಿದೆ. ಅನಂತರ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ತಮ್ಮೊಂದಿಗಿದ್ದ ಎಲ್ಲಾ ಜನರಿಗೆ ಎದ್ದೇಳಿ ಎಂದು ಹೇಳಿ ಹಝ್ರತ್ ಅಬೂ ತಲ್ಹಾ(ರ) ಅವರ ಮನೆಯ ಕಡೆ ಹೊರಟರು. ಅದಕ್ಕೆ ನಾನು ಅವರಿಗಿಂತ ಮುಂಚೆ ಮನೆಗೆ ಬಂದು ಹಝ್ರತ್ ಅಬೂ ತಲ್ಹಾ(ರ) ಅವರಿಗೆ ಈ ವಿಷಯ ತಿಳಿಸಿದೆ. ಅದಕ್ಕೆ ಅಬೂ ತಲ್ಹಾ(ರ) ಅವರು ಹಝ್ರತ್ ಉಮ್ಮೆ ಸುಲೇಮರನ್ನು ಉದ್ದೇಶಿಸಿ ಹೇಳಿದರು ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಎಲ್ಲಾ ಜನರೊಂದಿಗೆ ಮನೆಗೆ ಆಗಮಿಸುತ್ತಿದ್ದಾರೆ. ನಮ್ಮ ಬಳಿ ಇಷ್ಟು ಜನರಿಗೆ ನೀಡಲು ಆಹಾರವಿಲ್ಲ ಏನು ಮಾಡುವುದು? ಅದಕ್ಕೆ ಉಮ್ಮೆ ಸುಲೇಮ್ ಹೇಳಿದರು ಅಲ್ಲಾಹ್ ಹಾಗೂ ಅವರ ಸಂದೇಶವಾಹಕರು ಬಲ್ಲರು. ಅನಂತರ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಮನೆಗೆ ಬಂದು ಉಮ್ಮೆ ಸುಲೇಮರೊಂದಿಗೆ ಹೇಳಿದರು ನಿಮ್ಮ ಬಳಿ ಊಟಕ್ಕೆ ಏನದೆ ಅದನ್ನು ನೀಡಿರಿ. ಅದಕ್ಕೆ ಉಮ್ಮೆ ಸುಲೇಮ್ ತಮ್ಮ ಬಳಿ ಇದ್ದ ಜೋಳದ ರೊಟ್ಟಿಗಳನ್ನು ಹಾಗೂ ತುಪ್ಪವನ್ನು ನೀಡಿದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಆ ರೊಟ್ಟಿಗಳನ್ನು ಮುರಿಯಲು ಆದೇಶಿಸಿದರು ರೊಟ್ಟಿಗಳನ್ನು ಮುರಿಯಲಾಯಿತು ಅನಂತರ ಅದರಲ್ಲಿ ತುಪ್ಪವನ್ನು ಬೆರೆಸಲಾಯಿತು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅದರ ಮೇಲೆ ದುಆ ಮಾಡಿ ಹೊರಗಡೆಯಿಂದ ಹತ್ತು ಜನರನ್ನು ಒಳಗೆ ಬರಲು ಆದೇಶಿಸಿದರು. ಹತ್ತು ಜನರು ಒಳಗೆ ಬಂದು ಆಹಾರವನ್ನು ಸೇವಿಸಿ ಹೊರಗೆ ಹೋದರು. ಪುನಃ ಹತ್ತು ಜನರಿಗೆ ಒಳಗೆ ಬರಲು ಆದೇಶಿಸಿದರು. ಹತ್ತು ಜನರು ಒಳಗೆ ಬಂದು ಆಹಾರ ಸೇವಿಸಿ ಹೊರಗೆ ಹೋದರು. ಅನಂತರ ಪುನಃ ಹತ್ತು ಜನರನ್ನು ಒಳಗೆ ಬರಲು ಆದೇಶಿಸಿದರು. ಹತ್ತು ಜನರು ಒಳಗೆ ಬಂದು ಆಹಾರ ಸೇವಿಸಿ ಹೊರಗೆ ಹೋದರು. ಅನಂತರ ಪುನಃ ಹತ್ತು ಜನರನ್ನು ಒಳಗೆ ಬರಲು ಆದೇಶಿಸಿದರು. ಹತ್ತು ಜನರು ಒಳಗೆ ಬಂದು ಆಹಾರ ಸೇವಿಸಿ ಹೊರಗೆ ಹೋದರು. ಹೀಗೆ ಸುಮಾರು ಎಪ್ಪತ್ತು, ಎಂಬತ್ತು ಜನರು ಆಹಾರವನ್ನು ಸೇವಿಸಿದರು. (ಸಹೀಹ್ ಬುಖಾರಿ ಕಿತಾಬುಲ್ ಮುನಾಖಿಬ್ ಹದೀಸ್–3578)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ದುಆದ ಬರಕತ್ತಾಗಿತ್ತು.

ಹಝ್ರತ್ ಅನಸ್ ವರದಿ ಮಾಡುತ್ತಾರೆ: ಮದೀನದ ಅನ್‌ಸಾರ್‌ಗಳಲ್ಲಿ ಎಲ್ಲರಿಗಿಂತ ಹೆಚ್ಚು ಖರ್ಜೂರದ ತೋಟ ಹೊಂದಿದವರು ಹಝ್ರತ್ ಅಬೂ ತಲ್ಹಾ ಆಗಿದ್ದರು. ಮಸ್‌ಜಿದಿನ ಎದುರಿಗೆ ಇದ್ದ ಬಿಅ್‌ರ್‌ಹಾ ಎಂಬ ತೋಟ ಅವರಿಗೆ ಅತ್ಯಂತ ಪ್ರಿಯವಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ತೋಟಕ್ಕೆ ಹೋಗುತ್ತಿದ್ದರು ಮತ್ತು ಅಲ್ಲಿನ ಬಾವಿಯ ಶುದ್ಧವಾದ ನೀರನ್ನು ಕುಡಿಯುತ್ತಿದ್ದರು. ಹಝ್ರತ್ ಅನಸ್ ಹೇಳುತ್ತಾರೆ: ಪವಿತ್ರ ಖುರ್‌ಆನಿನ ವಚನ, **ಲನ್‌ತನಾಲುಲ್ ಬಿರ್‌ರ ಹತ್ತಾತುನ್‌ಫಿಖೂ ಮಿಮ್ಮಾ ತುಹಿಬ್ಬೂನ್**– ನಿಮಗೆ ಪ್ರಿಯವಾದವುಗಳಿಂದ (ದೇವಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ಈ ವಚನ ಅವತೀರ್ಣಗೊಂಡಾಗ ಹಝ್ರತ್ ಅಬೂ ತಲ್ಹಾ ಎದ್ದು ನಿಂತು ಹೇಳಿದರು: 'ಯಾ ರಸೂಲುಲ್ಲಾಹ್, ನನ್ನ ತೋಟಗಳಲ್ಲಿ ನನಗೆ ಅತ್ಯಂತ ಪ್ರಿಯಕರವಾದುದು ನನ್ನ ಬಿಅ್‌ರ್‌ಹಾ ತೋಟವಾಗಿದೆ. ಅದನ್ನು ನಾನು ಸದಖವಾಗಿ ಕೊಡುತ್ತೇನೆ. ಅಲ್ಲಾಹನ ಸನ್ನಿಧಿಯಲ್ಲಿ ಅದು ಅಂಗೀಕಾರಾರ್ಹ ಒಳಿತಾಗುವುದು ಎಂದು ನಾನು ಭಾವಿಸುತ್ತೇನೆ. ಅದು ನನಗೋಸ್ಕರ ಸಂಗ್ರಹಿಸಲ್ಪಡುವುದು. ಆದುದರಿಂದ ಅಲ್ಲಾಹನು ನಿಮಗೆ ಮನವರಿಕೆ ಮಾಡಿಕೊಡುವ ಹಾಗೆ ನೀವು ಅದನ್ನು ಖರ್ಚು ಮಾಡಿರಿ' ಎಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಶಾಬಾಶ್, ಅದು ಲಾಭದಾಯಕ ಸ್ವತ್ತಾಗಿದೆ. ಅಥವಾ ಹೇಳಿದರು: ಯಾವಾಗಲೂ ಬಾಕಿಯಾಗಿರುವ ಸಂಪತ್ತಾಗಿದೆ. ಅನಂತರ ಹೇಳಿದರು: ನೀವು ಹೇಳಿದುದನ್ನು ನಾನು ಆಲಿಸಿದೆ. ಆದರೆ ನೀವು ಆ ಸ್ವತ್ತನ್ನು ನಿಮ್ಮ ಸಂಬಂಧಿಕರಿಗೆಯೇ ಹಂಚಿಕೊಡುವುದು ಉತ್ತಮವೆಂದು ನಾನು ಭಾವಿಸುತ್ತೇನೆ. ಹಝ್ರತ್ ಅಬೂ ತಲ್ಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶದ ಪ್ರಕಾರ ತನ್ನ ಸಂಬಂಧಿಕರಿಗೆ ಮತ್ತು ತನ್ನ ಚಿಕ್ಕಪ್ಪನ ಮಕ್ಕಳಿಗೆ ಆ ತೋಟವನ್ನು ಹಂಚಿದರು. (ಸಹೀಹ್ ಬುಖಾರಿ ಕಿತಾಬುಲ್ ವಸಾಯ, ಹದೀಸ್–2769)

ಹಝ್ರತ್ ಅಬೂ ತಲ್‌ಹರಿಗೆ ಲಭಿಸಿದ ಇನ್ನೊಂದು ಗೌರವವೇನೆಂದರೆ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಬ್ಬ ಪುತ್ರಿ ನಿಧನ ಹೊಂದಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದೇಶ ಪ್ರಕಾರ ಅವರು ಗೋರಿಯೊಳಗೆ ಇಳಿದು ಮೃತ ಶರೀರವನ್ನು ಗೋರಿಯೊಳಗೆ ಇರಿಸಿದರು. (ಸಹೀಹ್ ಬುಖಾರಿ ಕಿತಬುಲ್ ಜನಾಝಾ, ಹದೀಸ್–1258)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ ಒಮ್ಮೆ ಮದೀನದವರು ಭಯಭೀತರಾದರು. ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಅಬೂ ತಲ್ಹ(ರ) ಅವರ ನಿಧಾನವಾಗಿ ಚಲಿಸುವ ಕುದುರೆಯ ಮೇಲೆ ಸವಾರರಾದರು. ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಹಿಂದಿರುಗಿದಾಗ ಅವರು ಹಝ್ರತ್ ಅಬೂ ತಲ್ಹ(ರ) ಅವರಿಗೆ ಹೇಳಿದರು ನಾವು ನಮ್ಮ ಈ ಕುದುರೆಯನ್ನು ಒಂದು ಸಮುದ್ರದ ಹಾಗೆ ಪಡೆದೆವು ಅಂದರೆ ಬಹಳ ಜೋರಾಗಿ ಚಲಿಸುವ ಹಾಗೆ. ತದನಂತರ ಚಲನೆಯಲ್ಲಿ ಆ ಕುದುರೆಯ ಎದುರು ಯಾವ ಕುದುರೆಯು ಇರಲಿಲ್ಲ. (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್ ವಸ್ಸೈಫ್, ಹದೀಸ್–2867)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ನಮ್ಮೊಂದಿಗೆ ಬೆರೆಯುತ್ತಿದ್ದರು. ನನ್ನ ಸಹೋದರನನ್ನು ತಮಾಷೆಗೆ ಹೇಳುತ್ತಿದ್ದರು ಅಬು ಉಮೇರ್! ನುಗೈರ್ ನಿನ್ನೊಂದಿಗೆ ಏನು ಮಾಡಿತು? ಅಬು ಉಮೇರ್ ಒಂದು ಚಿಕ್ಕ ಪಕ್ಷಿಯನ್ನು ಇಟ್ಟಿದ್ದನು. ನುಗೈರ ಪಕ್ಷಿಗೆ ಹೇಳುತ್ತಾರೆ. ಅದು ಹಾರಿ ಹೋಗಿತ್ತು ಅಥವಾ ಸತ್ತು ಹೋಗಿತ್ತು. ಏನೆ ಇರಲಿ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಅವನೊಂದಿಗೆ ತಮಾಷೆ ಮಾಡುತ್ತಿದ್ದರು. ಸಾಮಾನ್ಯವಾಗಿ ನಮಾಝಿನ ಹೊತ್ತು ಸಮೀಪವಾದಾಗ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ನಮ್ಮ ಮನೆಯಲ್ಲಿರುವಾಗ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಹಾಸಿಗೆಯನ್ನು ಹಾಸಲು ಆದೇಶಿಸುತ್ತಿದ್ದರು. ನಾನು ಅದನ್ನು ಹಾಸುತ್ತಿದ್ದೆವು. ಅನಂತರ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ನಮಾಝನ್ನು ನಿರ್ವಹಿಸಲು ನಿಲ್ಲುತ್ತಿದ್ದರು ನಾವು ಸಹ ಅವರ ಹಿಂದೆ ನಮಾಝ್ ನಿರ್ವಹಿಸಲು ನಿಲ್ಲುತ್ತಿದ್ದೆವು. (ಸನನ್ ಇಬ್ನೆ ಮಾಜ, ಕಿತಾಬುಲ್ ಅದಬ್, ಹದೀಸ್–3720, ಸಹೀಹ್ ಬುಖಾರಿ, ಕಿತಾಬುಲ್ ಅದಬ್, ಹದೀಸ್–6203)

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಅಬೂ ತಲ್ಹಾ ನನ್ನ ತಾಯಿಯನ್ನು ವಿವಾಹವಾದ ನಂತರ ಜನಿಸಿದ ಮಗುವಾದ ಅಬ್ದುಲ್ಲಾ ಬಿನ್ ಅಬೂ ತಲ್ಹಾನನ್ನು ಎತ್ತಿಕೊಂಡು ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದೆನು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಂಬಳಿ ಹೊದ್ದುಕೊಂಡಿದ್ದರು ಮತ್ತು ತನ್ನ ಒಂಟೆಗೆ ತೈಲ ಸವರುತ್ತಿದ್ದರು. ಅವರು

ಕೇಳಿದರು: ನಿನ್ನ ಹತ್ತಿರ ಖರ್ಜೂರ ಇದೆಯೋ? ನಾನು ಹೇಳಿದೆ: ಇದೆ ಎಂದು. ನಾನು ಕೆಲವು ಖರ್ಜೂರ ಹಣ್ಣುಗಳನ್ನು ಅವರಿಗೆ ಕೊಟ್ಟೆನು. ಅವರು ಆ ಹಣ್ಣುಗಳನ್ನು ಜಗಿದು ಮಗುವಿನ ಬಾಯಿಗೆ ಹಾಕಿದರು. ಮಗು ಅದನ್ನು ಹೀರಲು ತೊಡಗಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅನ್‌ಸಾರ್‌ಗಳು ಖರ್ಜೂರವನ್ನು ಪ್ರೀತಿಸುತ್ತಾರೆ. ಎಂದರೆ ಮಗುವಿಗೂ ಅದು ರುಚಿಕರವಾಯಿತು ಎಂದು. ಆ ಮಗುವಿಗೆ ಅಬ್ದುಲ್ಲಾ ಎಂದು ಹೆಸರಿಟ್ಟರು. (ಸಹೀಹ್ ಮುಸ್ಲಿಮ್, ಕಿತಾಬುಲ್ ಆದಾಬ್, ಹದೀಸ್–2144)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಹಝ್ರತ್ ಅಬೂ ತಲ್‌ಹ ಅವರ ಓರ್ವ ಪುತ್ರ ರೋಗ ಪೀಡಿತನಾದನು. ಹಝ್ರತ್ ಅಬೂ ತಲ್‌ಹ(ರ) ಹೊರಗೆ ಹೋದಾಗ ಆ ಮಗು ತೀರಿಕೊಂಡಿತು. ಹಝ್ರತ್ ಅಬೂ ತಲ್‌ಹ(ರ) ಹಿಂದಿರುಗಿದಾಗ ಅವರು ತಮ್ಮ ಪತ್ನಿಯನ್ನು ಕೇಳಿದರು ಮಗುವಿನ ಆರೋಗ್ಯ ಹೇಗಿದೆ? ಅದಕ್ಕೆ ಅವರು ಉತ್ತರಿಸಿದರು ಅವನು ಮೊದಲಿಗಿಂತ ಹೆಚ್ಚು ನೆಮ್ಮದಿಯಲ್ಲಿದ್ದಾನೆ. ಅನಂತರ ಅವರು ಅವರಿಗೆ ಊಟ ನೀಡಿದರು. ಊಟ ಮಾಡಿದರು. ರಾತ್ರಿ ಕಳೆದ ನಂತರ ಹೇಳಿದರು ಮಗುವಿನ ನಿಧನವಾಗಿದೆ ಹೋಗಿ ಅವನನ್ನು ದಫನ್ ಮಾಡಿರಿ. ಹಝ್ರತ್ ಅಬೂ ತಲ್‌ಹಾ(ರ) ಅವರು ಮುಂಜಾನೆ ಇದರ ಬಗ್ಗೆ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರಿಗೆ ತಿಳಿಸಿದರು. ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಅವರಿಗೆ ಸಂತಾನ ಪ್ರಾಪ್ತಿಯ ದುಆ ನೀಡಿದರು. ಅನಂತರ ಅವರಿಗೆ ಗಂಡು ಮಗು ಜನಿಸಿತು. (ಸಹೀಹ್ ಮುಸ್ಲಿಮ್, ಕಿತಾಬುಲ್ ಆದಾಬ್, ಹದೀಸ್–2144)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯ ಬಗ್ಗೆ ಬಗ್ಗೆ ಹೇಗೆ ಹೇಳಿದರು: ಮುಮಿನ್‌ಗೆ ಜೀವ ಬಲಿದಾನ ನೀಡುವುದು ಬಹಳ ದೊಡ್ಡ ವಿಷಯವಲ್ಲ. ಅನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ ಗಾಲಿಬ್‌ನ ಬಗ್ಗೆ ಅನೇಕ ಜನರು ವಾದಿಸುತ್ತಾರೆ ಅವರು ಮದ್ಯಪಾನ ಮಾಡುತ್ತಿದ್ದರು ಎಂದು. ಗಾಲಿಬ್ ನನ್ನ ಸಂಬಂಧಿಕನಾಗಿದ್ದನು, ನಾನು ನನ್ನ ಹಿರಿಯರಿಂದ ಕೇಳಿದ್ದೆ ಅವನು ಮದ್ಯಪಾನ ಮಾಡುತ್ತಿದ್ದ ಎಂದು. ಮದ್ಯಪಾನ ಮಾಡುವಂತಹ ವ್ಯಕ್ತಿಯು ಹೇಳುತ್ತಾನೆ:

**ಜಾನ್ ದೀ ದೀ ಹುವಿ ಉಸೀ ಕಿ ಥಿ,**
**ಹಖ್ ತೊ ಯೆ ಹೈ ಕೆ ಹಖ್ ಅದಾ ನ ಹುಆ.**

ಅಂದರೆ ನಾವು ಅಲ್ಲಾಹನ ಮಾರ್ಗದಲ್ಲಿ ಜೀವದಾನ ಮಾಡಿದರೆ ಏನಾಗುವುದು ಈ ಜೀವವು ಸಹ ಅವನೇ ನೀಡುವವನಾಗಿದ್ದಾನೆ. ಆದ್ದರಿಂದ ಅಲ್ಲಾಹನ ಆದೇಶವನ್ನು ಅನುಸರಿಸುತ್ತ ಜೀವ ಬಲಿದಾನಮಾಡಿದರೆ ದೊಡ್ಡ ವಿಷಯವಲ್ಲ ಏಕೆಂದರೆ ಈ ಜೀವವು ಸಹ ಅವನೇ ನೀಡಿರುತ್ತಾನೆ. ಯಾರಾದರು ಒಂದು ವಸ್ತು ನೀಡಿದರೆ ಅದನ್ನು ಹಿಂದಿರುಗಿಸಿ ಅವನಿಗೆ ನೀಡಿದರೆ ಇದು ದೊಡ್ಡ ವಿಷಯವಲ್ಲ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹದೀಸುಗಳಲ್ಲಿ ಒಬ್ಬ ಸಹಾಬಿ ಸ್ತ್ರೀಯ ಬಗ್ಗೆ ವಿವರಿಸಲಾಗಿದೆ. (ಇದು ಉಮ್ಮು ಸಲೀಮ್‌ರಿಗೆ ಸಂಬಂಧಿಸಿದುದಾಗಿದೆ). ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದೋ ಇಸ್ಲಾಮೀ ಸೇವೆಗೋಸ್ಕರ ಅವರ ಪತಿ ಅಬೂ ತಲ್‌ಹರನ್ನು ಬೇರೆ ಸ್ಥಳಕ್ಕೆ ಕಳುಹಿಸಿದ್ದರು. ಅವರ ಮಗು ರೋಗಬಾಧಿತವಾಗಿತ್ತು. ಪತಿ ಹಿಂದಿರುಗಿ ಬರುವಷ್ಟರಲ್ಲಿ ರೋಗಿಯಾದ ಮಗು ಮೃತವಾಯಿತು. ಆಗ ತಾಯಿ ಮಗುವಿನ ಮೇಲೆ ಬಟ್ಟೆ ಹೊದಿಸಿದರು. ಸ್ನಾನ ಮಾಡಿ ಸುಗಂಧ ದ್ರವ್ಯ ಸವರಿ ಬಹಳ ಧೈರ್ಯದಿಂದ ಪತಿಯನ್ನು ಸ್ವಾಗತಿಸಿದರು. ಪತಿ ಆಗಮಿಸಿದ ಕೂಡಲೇ ಮಗುವಿನ ಬಗ್ಗೆ ವಿಚಾರಿಸಿದಾಗ ಆ ಪತ್ನಿ ಹೇಳಿದರು: ಬಹಳ ಸುಖವಾಗಿ ಮಗು ಮಲಗಿದೆ ಎಂದು. ಪತಿ ಊಟ ಮಾಡಿದರು. ಪತ್ನಿಯೊಂದಿಗೆ ಸಂಗಮಿಸಿದರು. ಅನಂತರ ಪತ್ನಿ ಹೇಳಿದರು: ನಾನು ತಮ್ಮೊಂದಿಗೆ ಒಂದು ವಿಷಯ ಕೇಳಲು ಬಯಸುತ್ತೇನೆ. ಪತಿ ಹೇಳಿದರು: ಅದು ಏನು? ಪತ್ನಿ ಹೇಳಿದರು: ಒಬ್ಬನು ಇನ್ನೊಬ್ಬನ ಬಳಿ ಏನನ್ನಾದರೂ ಅಮಾನತಾಗಿ ಇರಿಸಿದರೆ ಮತ್ತು ಸ್ವಲ್ಪ ಸಮಯದ ನಂತರ ಅದನ್ನು ಮರಳಿ ಪಡೆಯಲು ಆಗಮಿಸಿದರೆ ಆ ವಸ್ತುವನ್ನು ಮರಳಿಸಬೇಕೋ ಬೇಡವೋ. ಪತಿ ಹೇಳಿದರು: ಅಮಾನತನ್ನು ಮರಳಿ ಕೊಡದವನು ಎಂತಹ ಅವಿವೇಕಿಯಾಗಿದ್ದಾನೆ. ಪತ್ನಿ ಹೇಳಿದರು: ಮರಳಿ ಕೊಡುವಾಗ ಅವನಿಗೆ ದುಃಖವಾಗಲಾರದೆ. ಪತಿ ಹೇಳಿದರು: ದುಃಖಿಸಲು ಕಾರಣವೇನಿದೆ. ಅವನ ಸ್ವಂತದ್ದು ಅಲ್ಲದ ವಸ್ತುವನ್ನು ಮರಳಿ ಕೊಡುವುದರ ಬಗ್ಗೆ ದುಃಖಿಸುವ ಆವಶ್ಯಕತೆ ಏನು? ಪತ್ನಿ ಹೇಳಿದರು: ಇದು ಒಳ್ಳೆಯ ಮಾತಾಗಿದೆ. ನಮ್ಮ ಮಗು ಅಲ್ಲಾಹನ ಒಂದು ಅಮಾನತಾಗಿತ್ತು. ಅಲ್ಲಾಹನು ಅದನ್ನು ನಮ್ಮಿಂದ ಮರಳಿ ತೆಗೆದುಕೊಂಡನು. ಇದು ಆ ಕಾಲದ ಮಹಿಳೆಯರಲ್ಲಿದ್ದ ಧೈರ್ಯವಾಗಿತ್ತು. ಜೀವ ಅರ್ಪಿಸುವುದು ಸತ್ಯವಿಶ್ವಾಸಿಗೆ ದೊಡ್ಡ ವಿಷಯವೇನೂ ಅಲ್ಲ. ಅದು ಸಾಮಾನ್ಯ ವಿಷಯವಾಗಿದೆ. (ಜಲ್ಸ ಸಾಲಾನ ಜಮಾಅತೆ ಅಹ್ಮದಿಯ ಲಾಹೋರ್ 1948, ಅನ್ವಾರುಲ್ ಉಲೂಮ್, ಸಂಪುಟ–21, ಪುಟ–53–54)

ಇದಕ್ಕು ಮುಂಚೆ ಪ್ರಸ್ತಾಪಿಸಲಾದ ಹದೀಸಿನ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿದ ಪ್ರಾರ್ಥನೆಯ ಫಲವಾಗಿ ಆ ದಂಪತಿಗಳಿಗೆ ಅಲ್ಲಾಹನು ಹೇಗೆ ಅನುಗ್ರಹಿಸಿದನೆಂದರೆ ಅನ್‌ಸಾರ್‌ಗಳ ಒಬ್ಬ ವ್ಯಕ್ತಿ ವರದಿ ಮಾಡುತ್ತಾರೆ: ನಾನು ಅಬೂ ತಲ್‌ಹಾರ 9 ಮಕ್ಕಳನ್ನು ನೋಡಿದೆ. ಅವರೆಲ್ಲರೂ ಪವಿತ್ರ ಖುರ್‌ಆನಿನ ಖಾರಿಗಳಾಗಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಜನಾಝಾ, ಹದೀಸ್–1301)

ಆಸಿಮ್ ಅಹ್ವಲ್ ವರದಿ ಮಾಡುತ್ತಾರೆ ನಾನು ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರ ಒಂದು ಲೋಟವನ್ನು ಹಝ್ರತ್ ಅನಸ್(ರ) ಅವರ ಹತ್ತಿರ ನೋಡಿದ್ದೆ. ಅದರಲ್ಲಿ ಬಿರುಕು ಬಂದಿತ್ತು. ಹಝ್ರತ್ ಅನಸ್(ರ) ಅವರು ಆ ಬಿರುಕನ್ನು ಬೆಳ್ಳಿಯಿಂದ ತುಂಬಿದ್ದರು. ಅದು ಒಂದು ಸುಂದರವಾದ ಹಾಗೂ ಉತ್ತಮ ಮರದಿಂದ ಮಾಡಲಾಗಿತ್ತು. ಹಝ್ರತ್ ಅನಸ್(ರ) ಹೇಳುತ್ತಾರೆ ನನು ಈ ಲೋಟದಿಂದ ಅನೇಕ ಬಾರಿ ನೀರನ್ನುಣಿಸಿದ್ದೇನೆ. ಇಬ್ನೆ ಸೀರೀನ್ ಹೇಳುತ್ತಾರೆ ಆ ಲೋಟವು ಕಬ್ಬಿಣದ ತಂತಿಯಿಂದ ಜೊಡಿಸಲಾಗಿತ್ತು. ಹಝ್ರತ್ ಅನಸ್(ರ) ಅ ಕಬ್ಬಿಣದ ತಂತಿಯ ಜಾಗದಲ್ಲಿ ಬೆಳ್ಳಿ ಅಥವಾ ಚಿನ್ನದಿಂದ ತಯಾರಿಸಲು ಭಾವಿಸಿದರು. ಆದರೆ ಹಝ್ರತ್ ಅಬೂ ತಲ್‌ಹಾ(ರ) ಹೇಳಿದರು ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಇದನ್ನು ತಯಾರಿಸಿದ್ದರು. ಆದ್ದರಿಂದ ಇದರಲ್ಲಿ ಯಾವ ರೀತಿಯ ಬದಲಾವಣೆ ಮಾಡಬೇಡಿರಿ ಎಂದರು. ಹಾಗಾಗಿ ಅವರು ಹೀಗೆ ಮಾಡಲಿಲ್ಲ. (ಸಹೀಹ್ ಬುಖಾರಿ ಕಿತಾಬುಲ್ ಅಶ್‌ರಬ, ಹದೀಸ್–5638)

ಹಝ್ರತ್ ಅನಸ್ ವರದಿ ಮಾಡುತ್ತಾರೆ: ನಾನು ಹಝ್ರತ್ ಅಬೂ ತಲ್‌ಹಾ, ಹಝ್ರತ್ ಉಬೈದ್ ಬಿನ್ ಜರಾಹ್ ಮತ್ತು ಹಝ್ರತ್ ಅಬೀ ಬಿನ್ ಕಅಬರಿಗೆ ಖರ್ಜೂರದ ಮದ್ಯವನ್ನು ಕುಡಿಸುತ್ತಿದ್ದಾಗ ಒಬ್ಬರು ಬಂದು ಹೇಳಿದರು: ಮದ್ಯಪಾನವನ್ನು ನಿಷಿದ್ಧಗೊಳಿಸಲಾಗಿದೆ ಎಂದು. ಆ ಸಮಾಚಾರ ಆಲಿಸಿದ ಕೂಡಲೇ ಹಝ್ರತ್ ಅಬೂ ತಲ್‌ಹಾ ಹೇಳಿದರು: ಓ ಅನಸ್, ಮದ್ಯದ ಆ ಮಡಕೆಗಳನ್ನು ಒಡೆದು ಹಾಕು. ಹಝ್ರತ್ ಅನಸ್ ಹೇಳುತ್ತಾರೆ: ನಾನು ಒಂದು ಕಲ್ಲು ತೆಗೆದುಕೊಂಡು ಮಡಕೆಗಳ ಕೆಳ ಭಾಗಕ್ಕೆ ಹೊಡೆದೆನು. (ಸಹೀಹ್ ಬುಖಾರಿ, ಕಿತಾಬ್ ಅಖ್‌ಬಾರುಲ್ ಇಹಾದ್, ಹದೀಸ್–7253)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ನಿಧನ ಹೊಂದಿದಾಗ ಮದೀನದಲ್ಲಿ ಓರ್ವ ವ್ಯಕ್ತಿ ಇದ್ದನು ಅವನು ಖಬರ್ ತಯಾರಿಸುತ್ತಿದ್ದನು ಮತ್ತೋರ್ವ ವ್ಯಕ್ತಿಯು ಇದ್ದನು ಅವನು ನೇರವಾಗಿ ಲಹದ್ (ಗೋರಿ) ತಯಾರಿಸುತ್ತಿದ್ದನು. ಸಹಾಬರು ಹೇಳಿದರು ನಾವು ಅಲ್ಲಾಹನಲ್ಲಿ ಇಸ್ತಿಖಾರ ದುಆ ಮಾಡುವೆವು ಇಬ್ಬರನ್ನು ಕರೆಸಿದರು. ಇಬ್ಬರಲ್ಲಿ ಯಾರು ಮೊದಲು ಬರುತ್ತಾರೋ ಅವನಿಗೆ ಈ ಕೆಲಸ ವಹಿಸುವುದು ಎಂದರು. ಹೀಗೆ ಲಹದ್ ತಯಾರಿಸುವವನು ಮೊದಲಿಗೆ ಬಂದನು ಆಗ ಸಹಾಬರವರು ರಸೂಲುಲ್ಲಾಹ್ ಸಲಲ್ಲಾಹು ಅಲಯಹಿವಸಲ್ಲಮರ ಲಹದ್ ತಯಾರಿಸಲಾಯಿತು. ಇದರ ವಿವರದಲ್ಲಿ ಅಲ್ಲಾಮ ಬುಸೀರಿ ಅವರು ಬರೆದಿದ್ದಾರೆ ಆ ಲಹದ್ ತಯಾರಿಸುವವರು ಅಬೂ ತಲ್‌ಹಾ(ರ) ಆಗಿದ್ದರು ಅದೇ ರೀತಿ ನೇರ ಖಬರ್ ತಯಾರಿಸುವವರು ಹಝ್ರತ್ ಅಬು ಉಬಾದ ಬಿನುಲ್ ಜರಹ್(ರ) ಆಗಿದ್ದರು. (ಶರಹ್ ಸನನ್ನ ಇಬ್ನೆ ಮಾಜ, ಭಾಗ–1, ಕಿತಾಬುಲ್ ಜನಾಏಝ್, ಪುಟ–617, ಬೈತುಲ್ ಅಫ್‌ಕಾರು ದೌಲಿಯ 2007) ಇದು ಅವರ ಸಂಪೂರ್ಣ ವಿವರವಾಗಿದೆ.

ಈಗ ನಾನು ಒಬ್ಬ ಮೃತರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು ಮತ್ತು ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು. ಮುಕರ್ರಮ್ ಬಾಊ ಮುಹಮ್ಮದ್ ಲತೀಫ್ ಸಾಹಿಬ್ ಅಮೃತಸರಿ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಹಝ್ರತ್ ಮಿಯಾಂ ನೂರ್ ಮುಹಮ್ಮದ್ ಸಾಹಿಬರ ಪುತ್ರರಾಗಿದ್ದರು. 2020 ಜನವರಿ 26ರಂದು ಅವರು ರಬ್ವದಲ್ಲಿ 90ನೇ ವಯಸ್ಸಿನಲ್ಲಿ ಮೃತರಾದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಅವರು ನಮ್ಮ ಜಮಾಅತಿನ ಪ್ರಸಿದ್ಧ ಮುಬಲ್ಲಿಗ್ ಮುಹ್ತರಮ್ ಮೌಲಾನ ಮುಹಮ್ಮದ್ ಸಿದ್ದೀಖ್ ಅಮೃತಸರಿಯವರ ತಮ್ಮನಾಗಿದ್ದರು. ಬಾಊ ಲತೀಫ್ ಸಾಹಿಬರನ್ನು ಅವರು ತರುಣರಾಗಿದ್ದಾಗ ಅವರ ಪಿತ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರ ಬಳಿಗೆ ಕರೆದುಕೊಂಡು ಹೋಗಿ ವಕ್‌ಫ್ ಮಾಡಿದರು. ಅವರು ನಾಲ್ಕುವರೆ ವರ್ಷಗಳ ಕಾಲ ರೈಲ್ವೆನಲ್ಲಿ ಕ್ಲರ್ಕ್ ಆಗಿದ್ದರು. ತದನಂತರ 1952ರಲ್ಲಿ ಅವರು ತಮ್ಮನ್ನು ಜಮಾಅತ್ತಿನ ಸೇವೆಗಾರರನ್ನಾಗಿ ಅರ್ಪಿಸಿದರು. 1952ರಿಂದ ಜಮಾಅತಿಗೆ ಸೇಲೆಸಲ್ಲಿಸುವ ಸೌಭಗ್ಯ ಪಡೆದರು. ಪ್ರಾರಂಭದಲ್ಲಿ ನಝಾರತ್ ಬಯತುಲ್ ಮಾಲ್‌ನಲ್ಲಿ ಸೇವೆಸಲ್ಲಿಸಿದರು. ಅನಂತರ 1954ರಲ್ಲಿ ಅಲ್‌ಫಝುಲ್ ದಿನ

ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸಿದರು. ಅನಂತರ 1961ರಲ್ಲಿ ಪ್ರೈವೇಟ್ ಸೆಕ್ರೇಟರಿಯ ಕಚ್ಛೇರಿಯಲ್ಲಿ ಗುಮಾಸ್ತನಾಗಿ ಸೇವೆ ಸಲ್ಲಿಸಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಕಾಲದಲ್ಲಿ ಕೊನೆಯ ಮೂರು ವರ್ಷ ಪ್ರೈವೇಟ್ ಸೆಕ್ರೇಟರಿಯ ಕಚ್ಛೇರಿಯಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅವರ ಖಿಲಾಫತ್ ಕಾಲಘಟ್ಟದಲ್ಲ ಅನಂತರ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರ ಹಿಜ್ರತ್ ನಂತರ ರಬ್ವಾಹ್‌ದಲ್ಲಿ ಪಿ.ಎಸ್ ಕಛ್ಛೇರಿ ಇದೆ ಇಲ್ಲಿಯ ವರೆಗೂ ಅಲ್ಲಿಯೇ ಸೇವೆ ಸಲ್ಲಿಸಿದರು.

ತಮ್ಮ ಹೊಣೆಗಾರಿಕೆಯನ್ನು ಬಹಳ ನಿಷ್ಠೆಯಿಂದ ನಿರ್ವಹಿಸುತ್ತಿದ್ದರು. ತಮ್ಮ ಕೆಲಸದೊಂದಿಗೆ ಧಾರ್ಮಿಕ ಅಧ್ಯಾಯನದಲ್ಲಿ ಬಹಳ ಆಸಕ್ತಿ ಹೊಂದಿದ್ದರು. ಜಮಾಅತ್ತಿನ ಗ್ರಂಥಗಳನ್ನು ಸಹ ಬಹಳಷ್ಟು ಅಧ್ಯಾಯನ ಮಾಡಿದ್ದರು. ಶೂರದ ವ್ಯವಸ್ಥೆಗಳಲ್ಲಿ ವಿಷೇಶವಾಗಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅವರ ಕಾಲದಲ್ಲಿ ಹಾಗೂ ನಂತರವು ಬಹಳಷ್ಟು ಸೇವೆ ಮಾಡಿದ್ದಾರೆ. ಪ್ರೈವೇಟ್ ಸೆಕ್ರೇಟರಿಯ ಕಚೇರಿಯಲ್ಲಿಯು ಸಹ ತಮ್ಮ ಹೊಣೆಗಾರಿಕೆಯನ್ನು ಬಹಳ ನಿಷ್ಠೆಯಿಂದ ನಿರ್ವಹಿಸಿದ್ದಾರೆ. ಪಾಕಿಸ್ತಾನ ವಿಭಜನೆಯ ಕಾಲದಲ್ಲಿ ಅವರು ಹಿಫಾಝುತೆ ಮರ್ಕಝ್ ಖಾದಿಯಾನ್‌ನಲ್ಲಿಯೂ ಭಾಗವಹಿಸಿದ್ದರು. ಅವರಿಗೆ ಐವರು ಪುತ್ರಿಯರು ಮತ್ತು ಒಬ್ಬ ಪುತ್ರರಿದ್ದರು. ಅವರು ಮೃತರಾಗುವ ಸ್ವಲ್ಪ ಕಾಲದ ಮೊದಲು ಅವರ ಒಬ್ಬ ಪುತ್ರಿ ನಿಧನ ಹೊಂದಿದ್ದರು. ಅವರ ಇಬ್ಬರು ಪುತ್ರರು ಮುರಬ್ಬಿ ಆಗಿದ್ದಾರೆ. ಮೂರು ಪುತ್ರಿಯರು ಹಾಗೂ ಒರ್ವ ಪುತ್ರ ಇಲ್ಲಿ ಲಂಡನ್ನಿನಲ್ಲಿ ವಾಸವಾಗಿದ್ದಾರೆ.

ಪ್ರೈವೇಟ್ ಸೆಕ್ರೇಟರಿಯ ರಾನಾ ಮುಬಾರಕ್ ಅಹ್ಮದ್ ಸಾಹೆಬ್ ಬರೆಯುತ್ತಾರೆ ನಾನು ಅವರೊಂದಿಗೆ 32 ವರ್ಷಗಳಿಂದ ಕಾರ್ಯನಿರ್ವಹಿಸಿದ್ದೇನೆ. ಮತ್ತು ಒಂದು ಸುದೀರ್ಘ ಕಾಲದವರೆಗೆ ಅವರು ಮಜ್‌ಲಿಸ್ ಮುಶಾವರತ್‌ನ ವ್ಯವಸ್ಥಾಪಕರಾಗಿದ್ದರು. ಈ ಕೆಲಸದಲ್ಲಿ ಅವರು ಕಚೇರಿಯ ಕಾರ್ಯಗಳು ಸ್ವತಃ ಮಾಡುತ್ತಿದ್ದರು ಮತ್ತು ಅವರು ಹೇಳುತ್ತಿದ್ದರು ಲೌಕಿಕ ಕಾರ್ಯಗಳಲ್ಲಿ ತೊಂದರೆ ಉಂಟಾದಲ್ಲಿ ದುಆವಿನೊಂದಿಗೆ ಜಮಾಅತ್ತಿನ ತಮ್ಮ ಕೆಲಸ ಮೊದಲಿಗಿಂ ಹೆಚ್ಚಾಗಿ ಮಾಡಬೇಕು ಆಗ ಅಲ್ಲಾಹನು ನಿಮ್ಮ ಲೌಕಿಕ ಕಾರ್ಯಗಳ ತೊಂದರೆಗಳನ್ನು ದೂರಗೊಳಿಸುತ್ತಾನೆ. ಎಂದಾದರು ಕಚೆರಿಯ ಕೆಲಸಗಾರರಿಂದ ತಪ್ಪಾದ್ದಲ್ಲಿ ಅವರು ಅವರಿಗೆ ಬಹಳ ಪ್ರೀತಿಯಿಂದ ತಿಳಿ ಹೇಳುತ್ತಿದ್ದರು. ಅದೇ ರೀತಿ ಸೇವಕರು ಇವರ ಬಗ್ಗೆ ಹೇಳುತ್ತಾರೆ ತಮ್ಮ ಕೆಲಸವನ್ನು ಬಹಳ ಶ್ರದ್ಧೆಯಿಂದ ಶ್ರಮದಿಂದ ಮಾಡುತ್ತಿದ್ದರು. ಅನ್‌ಜುಮನ್ನಿನ ನಿಯಮಗಳನ್ನು ಬಹಳಷ್ಟು ತಿಳಿದಿದ್ದರು. ಅವರ ಬರವಣಿಗೆಯು ಬಹಳ ಸುಂದರವಾಗಿರುತ್ತಿತ್ತು ಮತ್ತು ಅವರ ಬರವಣಿಗೆಯಲ್ಲಿ ಉಪಯೋಗಿಸುವಂತಹ ಪದಗಳು ಸಹ ಬಹಳ ಅದ್ಭುತವಾಗಿರುತ್ತಿತ್ತು. ಹೊಸ ಲೇಖನಿ ಪಡೆದಾಗ ಅವರು ಮೊಟ್ಟ ಮೊದಲಿಗೆ ಬಿಸ್ಮಿಲ್ಲಾಹ್ ಬರೆಯುತ್ತಿದ್ದರು. ತಮ್ಮ ಕಚೇರಿಗೆ ನಿರ್ದಿಷ್ಟ ಸಮಯಕ್ಕೆ ಆಗಮಿಸುತ್ತಿದ್ದರು ಮತ್ತು ಸರಿಯಾದ ಸಮಯಕ್ಕೆ ಮನೆಗೆ ತೆರಳುತ್ತಿರಲಿಲ್ಲ, ಬದಲಿಗೆ ತಮ್ಮ ಕೆಲಸ ಮುಗಿಸಿದ ನಂತರ ಕಚೇರಿಯಿಂದ ತೆರಳುತ್ತಿದ್ದರು ಕೆಲವೊಮ್ಮೆ ಮಧ್ಯ ರಾತ್ರಿಯವರೆಗೆ ಕಚೇರಿಯಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಿದ್ದರು. ನಾನು ರಬ್ವದಲ್ಲಿದ್ದಾಗ ಅವರನ್ನು ನೋಡಿದ್ದೆ. ಬಹಳ ನಿಷ್ಠೆಯಿಂದ ಕಚೇರಿಗೆ ಬಂದು ದುಡಿಯುವವರಾಗಿದ್ದರು. ಕಚೇರಿ ಸಮಯ ಮುಗಿದಿದೆ ಮನೆಗೆ ಹೋಗಬೇಕೆಂದು ಅವರು ಎಂದೂ ಯೋಚಿಸುತ್ತಿರಲಿಲ್ಲ. ಜಮಾಅತಿನ ಕೆಲಸ ಮಾಡಬೇಕು ಎಂಬುದೇ ಅವರ ಮೂಲ ಉದ್ದೇಶವಾಗಿತ್ತು. ಅವರ ಒಂದು ವೈಶಿಷ್ಟ್ಯವೇನೆಂದರೆ ಅವರು ಅನ್ಯರೊಂದಿಗೆ ಯಾವುದೇ ವಿಷಯದ ಬಗ್ಗೆ ಚರ್ಚಿಸುತ್ತಿರಲಿಲ್ಲ. ರಹಸ್ಯವಾಗಿರುವ ಪತ್ರಗಳನ್ನು ರಹಸ್ಯವಾಗಿಯೇ ಇರಿಸುತ್ತಿದ್ದರು. 1974ರಲ್ಲಿ ಖಲೀಫತುಲ್ ಮಸೀಹ್ ಸಾಲಿಸ್ ಇಸ್ಲಾಮಾಬಾದಿನ ಎಸೆಂಬ್ಲಿಯಲ್ಲಿ ಹೇಳಿಕೆ ನೀಡಲು ಹೋಗುತ್ತಿದ್ದಾಗ ಅವರು ಪ್ರೈವೇಟ್ ಸೆಕ್ರಿಟರಿಯ ಕಚೇರಿಯ ಹುದ್ದೇದಾರರಲ್ಲಿ ಒಬ್ಬರಾಗಿ ಅವರ ಜೊತೆಗೆ ಹೋಗುತ್ತಿದ್ದರು. ಅವರು ಕಚೇರಿ ಕೆಲಸವನ್ನು ಮಾಡುವುದರೊಂದಿಗೆ ಪರೋಪಕಾರಿ ಕೆಲಸಗಳನ್ನೂ ಮಾಡುತ್ತಿದ್ದರು. ಅವರು ಇತರರೊಂದಿಗೆ ಸೇರಿ ಪಾತ್ರೆಗಳನ್ನು ತೊಳೆಯುವ ಕೆಲಸವನ್ನು ಸಹ ಮಾಡುತ್ತಿದ್ದರು. ಅವರು ನಿಸ್ವಾರ್ಥ ಮನುಷ್ಯರಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನಿಂದ ವರ್ತಿಸುವವನಾಗಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು ಮತ್ತು ಅವರ ಸಂತಾನ ಪರಂಪರೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲಿ– ಆಮೀನ್.

*****************

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ ಮುಂದು ವರಿಸಲಾಗಿದೆ)*

Qudsiya Alam
Masters in Education

Asima Naseer
Masters in Education

Sana suhail
Masters in Pscychology

Mariyam Nasir
Masters in Electrical Engineering

Hibbatun Noor Mariyam
Masters in Material Science

Mehwish Hafeez
Masters in Education

Mehjabeen Hafeez
Masters in Private Law

Duriya Mallik
Diploma of Arcjitect of Interior/
Environmental Designer

Nida Naseer
Masters in Education

Juuvairiya Khan
Masters in Accountancy, control And audit

Nida Nasir
Masters in English

Maimuna Khan
Masters in Biology

Madiha chaudhary
P.Hd in General Medicines

Sanubar Khan
P.Hd in General Medicines

Rabiya Bin uwais
A-Level Science

Naduya anjum
A-Level

Haniya Afzal
Masters in Educational Science

Basima Chaudhry
Masters

ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ದರ್ಜೆ ಪಡೆದ 41 ವಿದ್ಯಾರ್ಥಿನಿಯರಿಗೆ ಸನದುಗಳನ್ನು ನೀಡಿದ ನಂತರ ಹುಝೂರ್(ಅಬಅ) ಅವರು ಉಪನ್ಯಾಸ ನೀಡಿದರು.

**ಮಹಿಳೆಯರ ವಿಭಾಗದಲ್ಲಿ ಭಾಷಣ**

ತಶಹುದ್, ತಊಝ್ ಮತ್ತು ಸುರಾ ಫಾತಿಹಾ ಪಠಣದ ನಂತರ ಹುಝೂರ್(ಅಬಅ) ಹೇಳಿದರು. ನಾನು ನಿನ್ನೆಯ ಖುತಬದಲ್ಲಿ ಹೇಳಿದಂತೆ ಇಂದು ಲೋಕವು ಬಹುವೇಗದಿಂದ ತಮ್ಮ ಪ್ರಭು ಸೃಷ್ಟಿಕರ್ತನಿಂದ ದೂರ ಸರಿಯುತ್ತಿದೆ. ಒಂದು ಬಹು ದೊಡ್ಡ ಸಂಖ್ಯೆಯು ಕೇವಲ ಧರ್ಮದಿಂದ ಮಾತ್ರ ದೂರವಾಗುತ್ತಿಲ್ಲ. ಬದಲಾಗಿ ದೇವರ ಅಸ್ತಿತ್ವವನ್ನೇ ನಿರಾಕರಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಇರುವಾಗ ಲೋಕದ ಭೌತಿಕ ವಸ್ತುಗಳನ್ನೇ ನೆಚ್ಚಿಕೊಂಡವರು ಈ ಪರಿಸ್ಥಿತಿಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ಇದರಲ್ಲಿ ಹಿರಿಯರೂ ಶಾಮೀಲಾಗಿದ್ದಾರೆ. ಮಕ್ಕಳೂ ಇದ್ದಾರೆ. ಯುವಕರೂ ಇದ್ದಾರೆ. ಇಂತಹ ಪರಿಸರದಲ್ಲಿ ನಮ್ಮ ಮೇಲೆ ಬಹುದೊಡ್ಡ ಜವಬ್ದಾರಿ ಇದೆ. ಅದೇನೆಂದರೆ ತಮ್ಮ ಪರಿಸರದ ಮೇಲೆ ನಿಗಾವಹಿಸಬೇಕು ಮತ್ತು ತನ್ನನ್ನು ಈ ಪರಿಸರದಿಂದ ರಕ್ಷಿಸಿಕೊಳ್ಳಬೇಕು. ಅಂತೆಯೇ ಮಕ್ಕಳನ್ನೂ ಈ ಪರಿಸರ ಪ್ರಭಾವದಿಂದ ರಕ್ಷಿಸಬೇಕಾಗಿದೆ. ಸ್ವಯಂ ಪ್ರಯತ್ನಪಟ್ಟು ಅಲ್ಲಾಹನ ಸಾನಿಧ್ಯವಹಿಸಲು ಪ್ರಯತ್ನಿಸಬೇಕಾಗಿದೆ ಮತ್ತು ತನ್ನ ಮಕ್ಕಳನ್ನು ಅಲ್ಲಾಹನ ಸಾನಿಧ್ಯಕ್ಕೆ ಒಪ್ಪಿಸಲು ಪ್ರಯತ್ನಿಸಬೇಕಾಗಿದೆ. ತನ್ನನ್ನೂ ಲೋಕದ ಅನಾಹುತಗಳಿಂದ ರಕ್ಷಿಸಿಕೊಳ್ಳಬೇಕು ಮತ್ತು ತನ್ನ ಸಂತಾನವನ್ನು ಲೋಕದ ಅನಾಹುತಗಳಿಂದ ರಕ್ಷಿಸಬೇಕಾಗಿದೆ. ಮಕ್ಕಳ ಮುಂದೆ ತನ್ನ ಮಾದರಿ ಪ್ರದರ್ಶಿಸಬೇಕು. ಅದನ್ನು ನೋಡಿ ಮಕ್ಕಳು ಆ ಮಾರ್ಗಗಳ ಮೂಲಕ ಅಲ್ಲಾಹನ ಸಾಮಿಪ್ಯ ಪಡೆಯುವಂತಾಗಬೇಕು. ಅಲ್ಲಾಹನ ಮೇಲೆ ವಿಶ್ವಾಸ ಹೊಂದುವಂತಾಗಬೇಕು. ಅಲ್ಲಾಹನ ಪ್ರೀತಿಗೆ ಪಾತ್ರರಾಗಿ ಪರಲೋಕವನ್ನು ಸುಧಾರಿಸಿಕೊಳ್ಳುವವರಾಗಬೇಕು.

ಹುಝೂರ್(ಅಬಅ) ಹೇಳಿದರು. ಯಾವರೀತಿ ಪುರುಷರಿಗೆ ತಮ್ಮ ಮಾದರಿಯನ್ನು ಸ್ಥಾಪಿಸಿ ಈ ಭೌತಿಕ ಲೋಕದ ಮೋಹದಿಂದ ರಕ್ಷಿಸಿಕೊಂಡು ಜೀವನ ಸಾಗಿಸುವ ಜವಬ್ದಾರಿ ಇದೆಯೋ ಅದೇ ರೀತಿ ಮಹಿಳೆಯರ ಜವಾಬ್ದಾರಿಯೂ ಆಗಿದೆ. ಅಲ್ಲಾಹ್ ಮತ್ತು ಅವನ ಪ್ರವಾದಿ ಮಕ್ಕಳ ತರಬೇತಿಯ ಹೊಣೆಯನ್ನು ಮಹಿಳೆಯರಿಗೆ ಒಪ್ಪಿಸಿದ್ದಾರೆ. ನಮ್ಮ ಮಹಿಳೆಯರು ಅಲ್ಲಾಹನನ್ನು ಪ್ರೀತಿಸುವುದಾದರೆ, ಅಲ್ಲಾಹನ ಭಯವನ್ನು ತಮ್ಮ ಮನದಲ್ಲಿ ಇರಿಸಿಕೊಳ್ಳುವುದಾದರೆ ತಮ್ಮ ಮಕ್ಕಳನ್ನು ರಕ್ಷಿಸಿಕೊಳ್ಳಲು ಈ ಪರಿಸರದಲ್ಲಿ ತುಂಬ ಶ್ರಮವಹಿಸುವ ಅಗತ್ಯವಿದೆ. ಹಲವು ಮಾತೆಯರು ತಮ್ಮ ಮಕ್ಕಳನ್ನು "ವಕ್ಫೆ ನೌ" ಗೆ ಒಪ್ಪಿಸುತ್ತಾರೆ. ಆ ವಕ್ಫೆ ನೌ ಮಕ್ಕಳ ತರಬೇತಿ ಮಾಡುವುದು ಅವರ ಜವಾಬ್ದಾರಿಯಾಗಿರುತ್ತದೆ. ಆದರೆ ಎಲ್ಲಾ ಮಕ್ಕಳ ಹಾಗೆ ಅವರ ನಿಗಾವಹಿಸುವುದಿಲ್ಲ. ವಕ್ಫೆ ನೌ ಮತ್ತು ವಕ್ಫೆ ನೌ ಅಲ್ಲದ ಮಕ್ಕಳ ಮೇಲೆ ಗಮನವಿಲ್ಲವಾದರೆ ಅವರ ತರಬೇತಿಯ ಮೇಲೆ ದುಷ್ಪರಿಣಾಮ ಬೀರಬಹುದಾಗಿದೆ. ವಕ್ಫೆ ನೌ ಮಕ್ಕಳ ತರಬೇತಿ ಸರಿಯಾಗಲಿಕ್ಕಿಲ್ಲ. ಹಾಗಯೇ ಕೇವಲ ವಕ್ಫೆ ನೌ ಮಕ್ಕಳ ಮೇಲೆ ಗಮನವಹಿಸಬೇಕಾಗಿದೆ ಎಂದು ಭಾವಿಸಬೇಡಿ ಅಥವಾ ಕೇವಲ ಬಾಲಕಿಯರಿಗೆ ಅಡೆ ತಡೆ ಒಡ್ಡಬೇಕು ಎಂದು ಭಾವಿಸಬೇಡಿರಿ. ಕೆಲ ತಾಯಿಯರು ಬಾಲಕರ ಕಡೆ ಹೆಚ್ಚು ಗಮನ ವಹಿಸುತ್ತಾರೆ ಅಥವಾ ಕೆಲ ತಾಯಂದಿರು ಬಾಲಕರನ್ನು ಹೆಚ್ಚು ಪ್ರೀತಿಸುತ್ತಾರೆ ಮತ್ತು ಬಾಲಕಿಯರನ್ನು ಅಲಕ್ಷಿಸುತ್ತಾರೆ. ತರಬೇತಿಯಲ್ಲಿ ಈ ರೀತಿಯ ತಾರತಮ್ಯದ ಪಕ್ಷ ವಹಿಸಿದರೆ ಮಗು ಖಂಡಿತವಾಗಿಯೂ ಕೆಡುವುದು.

ಹುಝೂರ್(ಅಬಅ) ನುಡಿದರು. ಪ್ರಸ್ತುತ ಪರಿಸರದಲ್ಲಿ ತರಬೇತಿಯ ವಿಷಯವು ತುಂಬ ಜಲ್ವಂತ ಸಮಸ್ಯೆಯಾಗಿದೆ. ಆದ್ದರಿಂದ ತುಂಬ ಜಾಗ್ರತೆ ವಹಿಸಿ ಹೆಜ್ಜೆ ಮುಂದಿಡಬೇಕಾಗುವುದು. ಪುರುಷರು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿಭಾಯಿಸುತ್ತಿಲ್ಲ. ಮತ್ತು ಅವರ ಮಕ್ಕಳ ಮೇಲೆ ವಿಶೇಷವಾಗಿ ಗಂಡು ಮಕ್ಕಳ ಮೇಲೆ ತಪ್ಪು ಪ್ರಭಾವ ಬೀರುವುದಾದರೆ ಇಂತಹ ಪುರುಷರಿಗೂ ಸಲಹೆ ನೀಡಬೇಕು ಮತ್ತು ತಮ್ಮ ಪತಿಯ ಕಡೆಯೂ ಗಮನವಹಿಸಬೇಕು.

ಹುಝೂರ್(ಅಬಅ) ಹೇಳಿದರು. ಮಹಿಳೆಯರು ತನ್ನ ಮನೆಯ ಉಸ್ತುವಾರಿ ವಹಿಸಿ ಒಂದು ಮಾದರಿಯಾಗುವ ಅವಶ್ಯಕತೆ ಇದೆ. ನಮಗೆ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ನನ್ನ ಸಹಾಬರು ನಿಮ್ಮ ಜೀವನಕ್ಕೆ ಮಾದರಿಯಾಗಿದ್ದಾರೆ. ಕೇವಲ ಪುರುಷರ ಮಾತ್ರ ಮಾದರಿಯಾಗಿ ಬಿಂಬಿತವಾಗಲಿಲ್ಲ ಮಹಿಳೆಯರು ಮಾದರಿಯಾಗಿದ್ದಾರೆ. ಅವರೂ ಕೂಡ ಹಝ್ರತ್ ರಸೂಲುಲ್ಲಾಹ್(ಸ)ರ ಬೈಅತ್ ಮಾಡುವ ಸೌಭಾಗ್ಯ ಪಡೆದವರಾಗಿದ್ದಾರೆ ಮತ್ತು ತಮ್ಮ ಮಾದರಿಗಳನ್ನು ಸ್ಥಾಪಿಸಿದ್ದಾರೆ.

ತಾವೂ ಕೂಡ ತಮ್ಮ ಪರಿಶುದ್ಧ ಮಾದರಿಯನ್ನು ಪ್ರದರ್ಶಿಸಬೇಕು. ಸಹಾಬಿಯಾತ್ ಸಹ ಹೀಗೆ ಅಲ್ಲಾಹನ ಆರಾಧನೆಯ ಅನುಸರನೆಯ ಯೋಗ್ಯ ಮಾದರಿಗಳನ್ನು ಪ್ರಸ್ತುಪಡಿಸಿದ್ದಾರೆ. ಅವರು ರಾತ್ರಿಗಳನ್ನು ಆರಾಧನೆಗಳಲ್ಲಿ ವ್ಯಯಿಸುವ, ಹಗಲಲ್ಲಿ ವ್ರತ (ಉಪವಾಸ) ನಿರ್ವಹಿಸುವ ಉದಾಹರಣೆಗಳು ದೊರೆಯುತ್ತವೆ. ಅವರ ಪತಿಯರು ಹಝ್ರತ್ ರಸೂಲುಲ್ಲಾಹ್(ಸ) ರವರ ಮುಂದೆ ದೂರು ಕೊಡಬೇಕಾಗುತ್ತಿತ್ತು. "ನನ್ನ ಪತ್ನಿ ರಾತ್ರಿಯಿಡೀ ಆರಾಧನೆಯಲ್ಲಿ ತೊಡಗಿರುತ್ತಾರೆ. ತಮ್ಮ ಜವಾಬ್ದಾರಿಗಳನ್ನು ಮತ್ತು ಹಕ್ಕುಗಳನ್ನು ಪೂರೈಸುವುದಿಲ್ಲ. ಆಗ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಮಹಿಳೆಯರಿಗೆ ಉಪದೇಶ ನೀಡಬೇಕಾಯಿತು. 'ಮಧ್ಯಮ ರೀತಿಯ ಹಾದಿಯನ್ನು ಅನುಸರಿಸಿರಿ" ಎಂದು ಸತತವಾಗಿ ಮನೆಯ ಜವಾಬ್ದಾರಿಗಳನ್ನು ಮರೆತು ಆರಾಧನೆಯಲ್ಲಿ ತೊಡಗುವುದು ಬೇಡ. ಹಾಗೆಯೇ ಸಂಪೂರ್ಣ ಲೌಕಿಕತೆಗೆ ವಾಲುವುದೂ ಬೇಡ. ಧರ್ಮದ ಹೆಸರಿಲ್ಲದಂತಹ ರೂಢಿಗಳೂ ಬೇಡ. ಆದ್ದರಿಂದ ಮಧ್ಯಮಗತಿಯನ್ನು ಅನುಸರಿಸುವಂತೆ ಉಪದೇಶಿಸಿದರು. ಅವರಿಗೆ ದೂರು ನೀಡಬೇಕಾದ ಕಾರಣ ಅವರ ಮಹಿಳೆಯರು ಅತಿ ಹೆಚ್ಚು ಆರಾಧನೆ ಮಾಡುವುದಾಗಿತ್ತು. ಈ ಪರಿಸರವು ಆ ಜನರ ಸ್ಥಿತಿ ಬದಲಾಯಿಸಿಬಿಟ್ಟಿತ್ತು. ಮಹಿಳೆಯರಿಗೂ ದೂರು ನೀಡಲು ಕಾರಣವಾಗಿದ್ದು, ನಮ್ಮ ಪುರುಷರು ದಿನವೆಲ್ಲ ವ್ರತ (ಉಪವಾಸ) ಹೊಂದುತ್ತಾರೆ ಮತ್ತು ರಾತ್ರಿಗಳನ್ನು ಆರಾಧನೆಯಲ್ಲಿ ಕಳೆಯುತ್ತಾರೆ ಎಂದು. ಒಂದು ವರದಿ ಹೀಗೂ ಬರುತ್ತದೆ. ಒಂದು ಸಂದರ್ಭದಲ್ಲಿ ಓರ್ವ ಸಹಾಬಿ ಎಂತಹ ರೂಪ ಧರಿಸಿದ್ದಳೆಂದರೆ ಅವರಿಗೆ ತಮ್ಮ ಅರಿವು ಇರಲಿಲ್ಲ. ಬಟ್ಟೆಗಳು ಹೊಲಸಾಗಿದ್ದವು. ಬಟ್ಟೆಯ ಕಡೆ ಗಮನವಿರಲಿಲ್ಲ. ಕೂದಲುಗಳನ್ನು ಬಾಚಿಕೊಳ್ಳುತ್ತಿರಲಿಲ್ಲ. ಕಾಲಕ್ಕನುಗುಣವಾಗಿ ಶೃಂಗಾರವು ಇರಲಿಲ್ಲ. ಆಗ ಹಝ್ರತ್ ರಸೂಲುಲ್ಲಾಹ್(ಸ) ರವರ ಓರ್ವ ಧರ್ಮಪತ್ನಿ ಅವರ ಬಳಿಗೆ ಬಂದಾಗ ಕೇಳಿದರು. "ಇದೇನು ನಿಮ್ಮ ಅವಸ್ಥೆ"? ಆಗ ಅವರ ಉತ್ತರ ಹೀಗೆ ಇತ್ತು "ನಾನು ತಯಾರಾಗುವುದು, ತಮ್ಮ ರೂಪ ಸರಿಪಡಿಸಿಕೊಳ್ಳುವುದು ಯಾರಿಗೋಸ್ಕರ, ನನ್ನ ಪತಿ ರಾತ್ರಿಗಳೆಲ್ಲ ಅಲ್ಲಾಹನ ಆರಾಧನೆಗಳಲ್ಲಿ ಕಳೆಯುತ್ತಾರೆ. ಹಗಲಲ್ಲಿ ಉಪವಾಸವಿರುತ್ತಾರೆ. ನನ್ನ ಕಡೆ ಅವರ ಗಮನವೇ ಇರುವುದಿಲ್ಲ. ಆಗ ಹಝ್ರತ್ ರಸೂಲುಲ್ಲಾಹ್(ಸ) ರವರ ಧರ್ಮಪತ್ನಿ ಪ್ರವಾದಿಯ(ಸ) ರವರ ಬಳಿ ಈ ವಿಷಯ ಪ್ರಸ್ತಾಪಿಸಿದರು. ಆಗ ಹಝ್ರತ್ ರಸೂಲುಲ್ಲಾಹ್(ಸ) ರವರು ಆ ವ್ಯಕ್ತಿಯನ್ನು ಕರೆದು ಹೇಳಿದರು. "ನಿಮ್ಮ ಪತ್ನಿಯ ಮೇಲೂ ನಿಮ್ಮ ಹಕ್ಕಿದೆ. ಅವರು ಹೇಳಿದರು. ನಾನು ನಿಮಗಿಂತ ಹೆಚ್ಚು ಅಲ್ಲಾಹನ ಸಮೀಪವಾಗಿದ್ದೇನೆ. ಉಪವಾಸವು ಇರುತ್ತೇನೆ. ಮಕ್ಕಳ ಹಕ್ಕುಗಳನ್ನು ಪಾಲಿಸುತ್ತೇನೆ. ಪತ್ನಿಯರ ಹಕ್ಕುಗಳನ್ನು ಪಾಲಿಸುತ್ತೇನೆ. ಸಮಾಜದ ಹಕ್ಕುಗಳನ್ನು ಪಾಲಿಸುತ್ತೇನೆ. ಆದ್ದರಿಂದ ನೀವೂ ತನ್ನ ಪತ್ನಿ ಮಕ್ಕಳ ಹಕ್ಕುಗಳನ್ನು ಪಾಲಿಸಿರಿ. ಅದಾದ ಮೇಲೆ ಕೆಲ ಅವಧಿ ನಂತರ ದುರಾವಸ್ಥೆಯಲ್ಲಿದ್ದ ಸಹಾಬಿಯಾ ಒಂದು ಸಂದರ್ಭದಲ್ಲಿ ಪ್ರವಾದಿ(ಸ) ರವರ ಧರ್ಮಪತ್ನಿಯರ ಬಳಿಗೆ ಬಂದರು. ಆಗ ತುಂಬ ತಯಾರಾಗಿ ಒಳ್ಳೆಯ ಬಟ್ಟೆಗಳನ್ನು ಧರಿಸಿ, ಸುಗಂಧ ಲೇಪಿಸಿಕೊಂಡು ಬಂದಿದ್ದರು. ಅವರು ಕೇಳಿದರು. ಇಂದು ನೀವು ತುಂಬ ಶೃಂಗರಿಸಿಕೊಂಡು ಬಂದಿದ್ದೀರಿ. ಏನು ಕಾರಣ? ಆ ಸಹಾಬಿಯಾ ಹೇಳಿದರು. ಹಝ್ರತ್ ರಸೂಲುಲ್ಲಾಹ್(ಸ) ರವರು ಉಪದೇಶ ಮಾಡಿದಾಗಿನಿಂದ ನನ್ನ ಪತಿಯೂ ನನ್ನ ಕಡೆ ಗಮನ ಹರಿಸಿದ್ದಾರೆ.

ಹುಝೂರ್(ಅಬಅ) ಹೇಳಿದರು. ಆದ್ದರಿಂದ ತಮ್ಮ ಜನ್ಮದ ಉದ್ದೇಶವನ್ನು ಪೂರ್ಣಗೊಳಿಸಲು ತನ್ನ ಸಂತಾನಗಳನ್ನು ವಿನಾಶದಿಂದ ರಕ್ಷಿಸಲು, ಅವರಿಗೆ ಅಲ್ಲಾಹನ ಸಮೀಪ ತರಲು ನಮಗೆ ನಮ್ಮ ಗುಣಗಳನ್ನು ಸುಧಾರಿಸಿಕೊಳ್ಳುವ ಅಗತ್ಯವಿದೆ. ನಾನು ನಿನ್ನೆಯ ಕುತುಬದಲ್ಲಿ ಈ ಕಡೆ ಗಮನ ಸೆಳೆದಿದ್ದೆ, ಪುರುಷರಿಗೆ ಐದು ಹೊತ್ತಿನ ನಮಾಝುಗಳನ್ನು ಮಸೀದಿಯಲ್ಲಿ ಬಂದು ಜಮಾಅತ್‌ನೊಂದಿಗೆ ನಿರ್ವಹಿಸುವ ಆಜ್ಞೆ ಇದೆ. ಆದರೆ ಮಹಿಳೆಯರಿಗೆ ಮನೆಗಳಲ್ಲಿಯೇ ನಮಾಝ್ ಮಾಡಲು ಅನುಮತಿ ಇದೆ. ಪುಣ್ಯವೂ ಪುರುಷರು ಮಸೀದಿಗೆ ಹೋಗಿ ನಮಾಝ್ ನಿರ್ವಹಿಸುವ ಸಮಾನವೇ ಆಗಿರುತ್ತದೆ. ಆದ್ದರಿಂದ ಈ ವಿನಾಯಿತಿಯಿಂದ ಪ್ರಯೋಜನ ಪಡೆಯದಿದ್ದರೆ ನಿಮ್ಮ ದೌರ್ಭಾಗ್ಯವಲ್ಲದಿದ್ದರೆ ಮತ್ತೇನು? ಕಾಲದ ಇಮಾಮರನ್ನು ನಂಬಿದ ಓರ್ವ ಅಹ್ಮದಿ ಸ್ತ್ರೀಯು ಪ್ರಸಕ್ತ ಕಾಲದ ದುಷ್ಕರ್ಮಗಳಿಂದ ರಕ್ಷಿಸಿಕೊಳ್ಳಲು ಅಲ್ಲಾಹನನ್ನು ಆರಾಧಿಸುವವಳಾಗಬೇಕಾಗಿದೆ. ಅವನ ಭಕ್ತಿಯ ಹಕ್ಕನ್ನು ನೀಡುವವನಾಗಬೇಕಾಗಿದೆ. ನೀವು ಅಲ್ಲಾಹನನ್ನು ಆರಾಧಿಸುವವರಾದಾಗ, ಭಕ್ತಿಯುಳ್ಳವರಾಗಬೇಕು. ಇತರ ಸತ್ಕರ್ಮಗಳನ್ನು ಮಾಡುವ ಭಾಗ್ಯ ದೊರೆತೀತು. ಆಗಲೇ ನಾನು ಅಲ್ಲಾಹನ ಮತ್ತು ಅವನ ಪ್ರವಾದಿಯ ಪರಿಪೂರ್ಣ ವಿಧೇಯನಾಗಬೇಕೆಂಬ ಭಾವನೆ ಮೂಡುವುದು. ಆಗ ನೀವು ಖಾನಿತಾತ್‌ನಲ್ಲಿ ಪರಿಗಣಿಸುವರಾಗುವಿರಿ. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಸ್ತ್ರೀಯು ತನ್ನ ಮನೆ ತನ್ನ ಪತಿಯ ಮನೆಯ ಉಸ್ತುವಾರಿ ವಹಿಸಿಕೊಳ್ಳುವವರಾಗುತ್ತಾಳೆ. ಅವಳು ಅವನ ಅನುಪಸ್ಥಿತಿಯಲ್ಲಿ ಅವನ ಮನೆ ಮತ್ತು ಸಂತಾನದ ಉಸ್ತುವಾರಿ ಮತ್ತು ರಕ್ಷಣೆಯ ಜವಾಬ್ದಾರರಾಗಿರುತ್ತಾಳೆ. ಆದ್ದರಿಂದ ಸಂತಾನದ ತರಬೇತಿಯ ಜವಾಬ್ದಾರಿಯು ಸ್ತ್ರೀಯ ಮೇಲೆ ಅತ್ಯಧಿಕವಾಗಿ ಹಾಕಲಾಗಿದೆ. ಪತಿಯು ಹೊರಗಿನ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾನೆ. ಮನೆಯಲ್ಲಿ ಇಲ್ಲದಿರುವಾಗ ಸ್ತ್ರೀಯೇ ಉಸ್ತುವಾರಿಯಾಗಿರುತ್ತಾಳೆ. ಮಕ್ಕಳು ಶಾಲೆಯಿಂದ ಮರಳಿ ಮನೆಗೆ

ಬರುವಾಗ ಮನೆಯಲ್ಲಿ ಸ್ತ್ರೀಯ ಉಪಸ್ಥಿತಿ ಅನಿವಾರ್ಯವಾಗಿದೆ. ಏಕೆಂದರೆ ಅವರ ಆಹಾರ ಉಪಹಾರದ ಬಗ್ಗೆ ಗಮನ ಕೊಡಬೇಕಾಗುತ್ತದೆ ಮತ್ತು ಶಾಲೆಯ ಪರಿಸ್ಥಿತಿಗಳ ಬಗ್ಗೆಯೂ ವಿಚಾರಿಸಬೇಕು ಮತ್ತು ಇತರ ತರಬೇತಿ ವಿಷಯಗಳ ಕುರಿತು ಅವರಿಗೆ ಅರಿವು ನೀಡಬೇಕು.

ಹುಝೂರ್(ಅಬಿಅ) ಹೇಳಿದರು. ಆದ್ದರಿಂದ ಅಹ್ಮದಿ ತಾಯಿಯರು ಪ್ರಸಕ್ತ ಸಮಯದಲ್ಲಿ ಪ್ರಯತ್ನಿಸ ಬೇಕಾಗುವುದು. ಅವರು ತಮ್ಮ ಮಕ್ಕಳ ಭಾವನೆಗಳನ್ನು ಅರಿತು ಇಲ್ಲಿಯ ಪರಿಸರದ ಪ್ರಭಾವಗಳನ್ನು ಅರಿತು ಮಕ್ಕಳಿಗೆ ಒಳ್ಳೆಯ ಮತ್ತು ಕೆಟ್ಟದರ ಅರಿವು ಮೂಡಿಸಬೇಕಾಗುತ್ತದೆ. ಇತ್ತಿಚೆಗೆ ಇಲ್ಲಿ ಸ್ವಾತಂತ್ರ್ಯದ ಹೆಸರಿನಲ್ಲಿ ಮಕ್ಕಳಿಗೆ ಬಾಲ್ಯದಿಂದಲೇ ಮಕ್ಕಳಿಗೆ ಸಂಬಂಧವಿಲ್ಲದ ವಿಷಯಗಳ ಬಗ್ಗೆ ಹೇಳಲಾಗುತ್ತದೆ. ಮಕ್ಕಳು ಪ್ರೌಢಾವಸ್ಥೆಗೆ ತಲುಪುವವರೆಗೆ ತಿಳಿಯಲು ಸಾಧ್ಯವೇ ಇಲ್ಲದಂತಹ ವಿಷಯಗಳು ಅವರಿಗೆ ಹೇಳಲಾಗುತ್ತದೆ. ವಿಧ್ಯೆಯ ಹೆಸರಿನಲ್ಲಿ ಇದೆಲ್ಲ ಹೇಳಲಾಗುತ್ತದೆ. ವಿಧ್ಯೆ ಎಂಬ ಬೆಳಕಿನ ಹೆಸರಿನಲ್ಲಿ ಮಕ್ಕಳಿಗೆ ಈ ಜನರು ನೈತಿಕ ಅಂಧಕಾರಗಳಲ್ಲಿ ದೂಡುವ ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ಈ ವಿಷಯಗಳನ್ನು ಕಲಿಸುತ್ತಿದ್ದಾರೆ. ಈ ಕಾರಣದಿಂದ ಮಕ್ಕಳು ನೈತಿಕತೆಯಲ್ಲಿ ನೈತಿಕ ಅಂಧಕಾರದಲ್ಲಿ ಮುಳುಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಾಯಂದಿರ ಜವಾಬ್ಧಾರಿಯು ಮೊದಲಿಗಿಂತ ಹೆಚ್ಚಾಗಿರುತ್ತದೆ. ತಾಯಂದಿರು ತಮ್ಮ ಮನೆಯ ಉಸ್ತುವಾರಿಯನ್ನು ವಹಿಸಿಕೊಂಡು ಈ ಅನರ್ಥ ಮತ್ತು ಅಪವಿತ್ರ ವಿಷಯಗಳನ್ನು ರದ್ದುಗೊಳಿಸಲು ಮೊದಲು ಸ್ವಯಂ ತಿಳುವಳಿಕೆ ಹೊಂದಬೇಕು. ಸ್ವಯಂ ಮಾಹಿತಿಗಳನ್ನು ಕಲೆ ಹಾಕಬೇಕು. ಶಾಲೆಯಿಂದ ಕಲಿತು ಬಂದ ಯಾವುದರ ಬಗ್ಗೆಯೂ ಪ್ರಶ್ನೆ ಕೇಳಿದರೆ ಆ ಕುರಿತು ಆತಂಕಗೊಳ್ಳದೇ ಅವನು ಕೇಳಿದ ಪ್ರಶ್ನೆಗೆ, ಅವನ ಪ್ರಶ್ನೆಗಳು ಅಶ್ಲೀಲವಾಗಿದ್ದರೆ ಅವರಿಗೆ ಮನದಟ್ಟಾಗುವಂತೆ ಉತ್ತರ ನೀಡಬೇಕು. ಅದರ ಕೆಟ್ಟತನ ಎತ್ತಿ ತೋರಿಸಬೇಕು. ಇನ್ನೂ ನಿಮ್ಮ ಮನಸ್ಸು ಆ ಸ್ಥಿತಿಗೆ ಬರಲಿಲ್ಲ ಎಂದು ತಿಳಿಸಬೆಕು. ಹೀಗೆ ನಾವು ನಮ್ಮ ಮಕ್ಕಳನ್ನು ರಕ್ಷಿಸಬಹುದಾಗಿದೆ. ಇಲ್ಲದಿದ್ದರೆ ಈ ಭೌತಿಕ ವ್ಯಾಮೋಹದ ಪರಿಸರ ನಮ್ಮ ಸಂತಾನವನ್ನು ನಾಶಗೊಳಿಸುವುದು.

ಹುಝೂರ್(ಅಬಿಅ) ಹೇಳಿದರು. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಚಿಂತಿತನಾಗಿ ಈ ಕಡೆ ಗಮನ ಹರಿಸುವ ಅಗತ್ಯವಿದೆ. ಪ್ರತಿಯೊಂದು ಅಹ್ಮದಿ ಸ್ತ್ರೀಯು ತನ್ನ ಮಾದರಿಗಳ ಮೂಲಕ ಮತ್ತು ಪ್ರಾರ್ಥನೆಗಳೊಂದಿಗೆ ಅತ್ಯಂತ ಉನ್ನತ ಮಟ್ಟದ ತರಬೇತಿ ನೀಡುವ ಅವಶ್ಯಕತೆ ಇದೆ. ಈ ಮಾತೆಯರ ಅಸ್ತಿತ್ವವು ಅಲ್ಲಾಹನ ಅನುಗ್ರಹಗಳನ್ನು ಅಪ್ಪಿಕೊಂಡು ತನ್ನ ಸಂತಾನಕ್ಕೆ ಬಂಡವಾಳ ರೂಪದಲ್ಲಿ ಜಮಾಅತಿಗೆ ನೀಡುತ್ತಿದ್ದಾರೆ ಎಂದು ಹೇಳುವಂತಾಗಬೇಕು. ಈ ಸಂತಾನ, ಈ ಮಕ್ಕಳು ನಿಮ್ಮಲ್ಲಿ ಜಮಾಅತ್ತಿನ ಅಮಾನತ್ ಇದ್ದಂತೆ, ಅವರಿಗೆ ತರಬೇತಿ ನೀಡಿದ ಕಾರಣ ಇವೆಲ್ಲ ಮಕ್ಕಳು ಅಲ್ಲಾಹನ ಅಚ್ಚುಮೆಚ್ಚಿನ ಸಂಪತ್ತಾಗಿದ್ದಾರೆ. ಇಂತಹವರ ಮೇಲೆ ಅಲ್ಲಾಹನ ಪ್ರೀತಿಯ ದೃಷ್ಟಿ ಕ್ಷಣಕ್ಷಣಕ್ಕೂ ಬೀಳುತ್ತಿರುತ್ತದೆ. ಅವು ತನ್ನ ಪರಿಶುದ್ಧ ಮಾನಸಿಕತೆಯಿಂದಾಗಿ ಲೋಕದ ಮಾಲಿನ್ಯದ ಕಡೆಗೆ ದೃಷ್ಟಿ ಎತ್ತಿಯೂ ನೋಡುವುದಿಲ್ಲ. ಟಿ.ವಿ, ಇಂಟರ್‌ನೆಟ್‌ನ ಅನರ್ಥ, ದುರುದ್ದೇಶ ಹಾಗೂ ಅಶ್ಲೀಲ ಮತ್ತು ಕೆಟ್ಟ ಕಾರ್ಯಕ್ರಮಗಳ ಕುರಿತು ಲಕ್ಷ್ಯವಹಿಸುವುದಿಲ್ಲ. ಅವರಿಗೆ ಲಕ್ಷ್ಯವಿದ್ದರೆ ಅದು ಅಲ್ಲಾಹನ ಅನುಗ್ರಹ ಯಾಚಿಸುವ ಕುರಿತು ಮಾತ್ರವಿದೆ. ಲೋಕವು ಹೇಳುವಂತಾಗಬೆಕು. ಈ ಮಕ್ಕಳು ಎಂತಹ ಮಕ್ಕಳಾಗಿದ್ದಾರೆಂದರೆ ಇವರಿಗೆ ದುಷ್ಕರ್ಮಗಳಲ್ಲಿ ಆಸಕ್ತಿಯಿಲ್ಲ. ಅನರ್ಥ ಮಾತುಗಳಲ್ಲಿ ಆಸಕ್ತಿ ಇಲ್ಲ. ಸಮಯ ಹಾಳು ಮಾಡುವುದರಲ್ಲಿ ಆಸಕ್ತಿ ಇಲ್ಲ. ಗೂಂಡಾಗಿರಿಯಲ್ಲಿ ಆಸಕ್ತಿ ಇಲ್ಲ. ಹೊರಗೆ ಹುಡುಗರಲ್ಲಿ ಸೇರಿ ಮದ್ಯ ಸೇವನೆಯಲ್ಲಿ ಆಸಕ್ತಿಯಿಲ್ಲ. ಬದಲಾಗಿ ಇವರಿಗೆ ಅಲ್ಲಾಹನ ಅನುಗ್ರಹವನ್ನು ಪಡೆಯುವುದರಲ್ಲಿ ಆಸಕ್ತಿ ಇದೆ. ಚಿಂತೆಯಿದ್ದರೆ ಅದು ಹಝ್‌ರತ್ ಮಸೀಹ್ ಮೌಊದ್(ಅ) ರೊಂದಿಗೆ ಅಲ್ಲಾಹನು ನೀಡಿದ ವಾಗ್ದಾನಗಳ ಭಾಗವಾಗುವ. ನನ್ನ ಅನುಯಾಯಿಗಳು ಜ್ಞಾನ ಸಂಪಾದನೆಯಲ್ಲಿ ಪ್ರಗತಿ ಸಾಧಿಸುವರು. ಇದು ಅಲ್ಲಾಹನ ವಾಗ್ದಾನವಾಗಿದೆ. ಪ್ರಗತಿ ಹೊಂದಿ ಲೋಕಕ್ಕೆ ಮಾರ್ಗದರ್ಶನ ನೀಡುವರು. ಲೋಕವನ್ನು ದಜ್ಜಾಲಿ ದುಷ್ಕರ್ಮಗಳಿಂದ ರಕ್ಷಿಸುವರು. ಆದ್ದರಿಂದ ಇಂತಹ ಅನರ್ಘ್ಯ ರತ್ನಗಳಿಗೆ ಜನ್ಮ ನೀಡುವವರಾಗಬೇಕು. ಇಂತಹ ಮೂಮೀನ್ ಪತ್ನಿಯರು ಮತ್ತು ಮಾತೆಯರು ಆಗಬೇಕು. ಅವರ ಕುರಿತು ಹಝ್‌ರತ್ ರಸೂಲುಲ್ಲಾಹ್(ಸ) ಹೇಳಿದರು. ಇವರು ಅತ್ಯುತ್ತಮ ಸಂಪತ್ತಿನಲ್ಲಿ ಸೇರಿದವರಾಗಿದ್ದಾರೆ.

ಹುಝೂರ್(ಅಬಿಅ) ಹೇಳಿದರು. ಅದೇ ರೀತಿ ಮಾತೆಯರು ನೆನಪಿಡಬೇಕು. ಬಾಲಕಿಯರ ತರಬೇತಿಗೋಸ್ಕರ ತಾವು ಆದರ್ಶರಾಗಿರಬೇಕು. ವಿಶೇಷವಾಗಿ ತಮ್ಮ ವೇಷಭೂಷ ಮತ್ತು ಪರದೆಯ ಕಡೆ ಲಕ್ಷ್ಯ ವಹಿಸಬೇಕು. ಲಜ್ಜೆಯು ಸ್ತ್ರೀಯ ಭೂಷಣವಾಗಿದೆ. ಹುಡುಗಿಯರಿಗೆ ತಿಳಿಸಬೇಕು. ಈ ನಾಮಾಮಾತ್ರದ ಪ್ರಗತಿಪರ ಸಮಾಜವು ನಿಮ್ಮ ಲಜ್ಜೆಯ ಸುರಕ್ಷತೆ ವಹಿಸುವುದಿಲ್ಲ. ಬಾಲ್ಯದಲ್ಲಿಯೇ ತಿಳಿಸಬೇಕು. ಐದಾರು ವರ್ಷ ವಯಸ್ಸಿನಲ್ಲಿಯೇ ಹುಡುಗಿಯರಿಗೆ ತಿಳಿಸಬೇಕು. ಈ ಸಮಾಜ ನಿಮ್ಮ ಗೌರವದ ಸುರಕ್ಷತೆ ವಹಿಸುವುದಿಲ್ಲ. ಗೌರವ, ಲಜ್ಜೆಯ ಸುರಕ್ಷತೆಯು ಅಲ್ಲಾಹನು ನಿರ್ದೇಶಿಸಿದ ಮಾರ್ಗದಲ್ಲಿ ನಡೆಯುವುದರಲ್ಲಿ ಅಡಗಿದೆ. ಆದ್ದರಿಂದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪರದೆಯ ಆದೇಶ ನೀಡಿದ್ದಾನೆ. ಮತ್ತು ಲಜ್ಜೆಯನ್ನು ಕಾಪಾಡುವ ಆದೇಶವೂ ನೀಡಿದ್ದಾನೆ. ನಿರಂತರವಾಗಿ ಮಕ್ಕಳಿಗೆ ತಿಳಿಸುತ್ತಿರಬೇಕು. ಅಲ್ಲಾಹನ ಈ ಆದೇಶವನ್ನು ಯಾವತ್ತೂ ತಮ್ಮ ಮುಂದಿರಿಸಿಕೊಳ್ಳಬೇಕು ಈ ವಿಷಯದಲ್ಲಿ ಹಿಂಜರಿಯುವ ಅವಶ್ಯಕತೆ ಇಲ್ಲ. ಮನಸ್ಸಿನಲ್ಲಿ ಯಾವ ಅಳುಕೂ ಇಟ್ಟುಕೊಳ್ಳಬಾರದು. ಮಾತೆಯರು ಸ್ವಯಂ ಪರದೆಯ ರಕ್ಷಣೆ ವಹಿಸಿದರೆ ಮತ್ತು ಮಕ್ಕಳಿಗೆ ಇದರ ಪ್ರಾಮುಖ್ಯತೆ ಹೇಳಿಕೊಟ್ಟರೆ ಖಂಡಿತವಾಗಿಯೂ ಇದರ ಸತ್ಪರಿಣಾಮ ಮಕ್ಕಳ ಮೇಲೆ ಆಗುವುದು.

ಹುಝೂರ್(ಅಬಿಅ) ಹೇಳಿದರು. ಕೆಲವು ವಿಧ್ಯಾವಂತರಾದ ಹುಡುಗಿಯರು ತಮ್ಮ ತಾಯಂದಿರು ಪುರಾತನ ಕಾಲದವರಾಗಿದ್ದಾರೆಂದು ಭಾವಿಸುತ್ತಾರೆ. ಈ ಕಾಲಕ್ಕೆ ತಕ್ಕಂತೆ ನಡೆಯಲು ಪರದೆಯಲ್ಲಿ ಸ್ವಲ್ಪ ಮೃದುತನ ತರುವ ಅವಶ್ಯಕತೆ ಇದೆ. ಕೆಲವು ಸಂದರ್ಭಗಳಲ್ಲಿ ಪರದೆ ಮಾಡದೆ ಇರುವ ಅವಶ್ಯಕತೆ ಇರುತ್ತದೆ ಎಂಬ ವಿಷಯ ಅವರಿಗೆ ಏನು ಗೊತ್ತು? ಆದರೆ ಯಾವಾಗಲೂ ನಾವು ಈ ವಿಷಯ ನೆನಪಿಡಬೇಕಾಗಿದೆ. ಯಾರು ಅಲ್ಲಾಹನ ಆಜ್ಞೆಗಳನ್ನು ಧಿಕ್ಕರಿಸಿ ನಡೆಯುವರೋ. ಅವರು ತಮ್ಮ ಮತ್ತು ತಮ್ಮ ಪೀಳಿಗೆಯ ಜೀವನವನ್ನು ನಾಶಗೊಳಿಸುವರು. ಆದ್ದರಿಂದ ಯಾವ ಆತಂಕವಿಲ್ಲದೆ ಓರ್ವ ಅಹ್ಮದಿ ಬಾಲಕಿ ಮತ್ತು ಸ್ತ್ರೀಯು ಲಜ್ಜೆಗೆಟ್ಟ ವೇಷದ ಮೇಲೆ ಶಾಪ ಹಾಕುತ್ತ ತಿರಸ್ಕರಿಸಬೇಕಾಗಿದೆ. ಯಾವ ವೇಷ ಭೂಷಣ ಲಜ್ಜೆಗೆಡುವಂತಿರುತ್ತದೆಯೋ ಅದು ಅಲ್ಲಾಹನ ಆಜ್ಞೆ ಉಲ್ಲಂಘಿಸಬೇಕಾಗಿರುತ್ತದೆ. ಕೆಲವರು ಈ ನೆಪ ಒಡ್ಡುತ್ತಾರೆ. ಕೆಲಸಕ್ಕೆ ಹೋಗಬೇಕಾದರೆ ಕೆಲವು ನಿಯುಮಿತ ವೇಷ ಧರಿಸಬೇಕಾಗುತ್ತದೆ. Jeans ಇಲ್ಲದೆ ನಡೆಯುವುದಿಲ್ಲ. ಸ್ಕಾರ್ಫ್ ತೆಗೆದುಕೊಳ್ಳುವುದಿಲ್ಲ. ಮತ್ತು ಉದ್ದವಾದ ಕೋಟ್ ಧರಿಸುವುದಿಲ್ಲವಾದರೆ ಇಂತಹ ಕೆಲಸದಿಂದ ನಮ್ಮ ಹುಡುಗಿಯರು ದೂರ ಇರಬೇಕಾಗಿದೆ. ಅದು ಬೆತ್ತನೆಯ ವಸ್ತ್ರದ ಕಡೆ ನಮಗೆ ಆಹ್ವಾನಿತ ಕೆಲಸವಾಗಿದೆ.

ಹುಝೂರ್(ಅಬಿಅ) ನುಡಿದರು. ಅಲ್ಲಾಹನು ನಮ್ಮ ಪರಿಪಾಲಕನಾಗಿದ್ದಾನೆ ಎಂಬ ವಿಶ್ವಾಸ ಹೊಂದಿ ಸಜ್ಜನರಾಗುವ ಪ್ರಯತ್ನ ಮಾಡಿದರೆ ಅಲ್ಲಾಹನು ತನ್ನ ವಾಗ್ಧಾನ ಪ್ರಕಾರ ಸಜ್ಜನರ ಪರವಾಗಿರುತ್ತಾನೆ.

ಈ ಪರದೆಯಿಂದ ಸ್ವತಂತ್ರವಾದರೆ ಮುಂದಿನ ಪೀಳಿಗೆಗಳು ಇನ್ನು ಹೆಚ್ಚಿನ ಸ್ವಾತಂತ್ರ್ಯ ಪ್ರಿಯರಾಗುವರು ಮತ್ತು ಧರ್ಮದಿಂದ ದೂರವಾಗುವರು.

ಹಝ್‌ರತ್ ಮಸೀಹ್ ಮೌಊದ್(ಅ) ರವರ ಈ ಅಧ್ಯಾಪನೆಯು ಸಹ ತಮ್ಮ ಮುಂದಿರಿಸಬೇಕು "ಯೂರೋಪಿನ ಮಾದರಿಯಲ್ಲಿ ಜನರು ಪರದೆ ರಹಿತರಾಗಲು ಒತ್ತು ಕೊಡುತ್ತಿದ್ದಾರೆ ಆದರೆ ಇದು ಖಂಡಿತವಾಗಿಯೂ ಅನುಚಿತವಾಗಿದೆ. ಇದುವೇ ಸ್ತ್ರೀಯರ ಸ್ವಾತಂತ್ರ್ಯ ಮತ್ತು ಅರಾಜಕತೆಯಾಗಬೇಕಾಗಿದೆ." ಇದು ಅಗತ್ಯಕ್ಕಿಂತ ಹೆಚ್ಚು ಸ್ವಾತಂತ್ರ್ಯಕ್ಕೆ ಪ್ರೇರಣೆ ನಿಡುತ್ತದೆ. ಧರ್ಮದಿಂದ ದೂರ ಮಾಡುತ್ತದೆ ಮತ್ತು ಧರ್ಮಾದೇಶಗಳನ್ನು ಉಲ್ಲಂಘಿಸುವಂತೆ ಮಾಡುತ್ತದೆ. ಅದರ ಬೇರು ಸ್ವಾತಂತ್ರ್ಯವಿದೆ. ಆದ್ದರಿಂದ ಬಹಳ ಜಾಗರೂಕರಾಗಿ ಚಿಂತಿಸಿ ಹೆಜ್ಜೆ ಇಡಬೇಕಾದ ಅವಶ್ಯಕತೆ ಇದೆ.

ಹುಝೂರ್(ಅಬಿಅ) ಹೇಳಿದರು. ಆದ್ದರಿಂದ ಸದಾ ನೆನಪಿಡಿರಿ. ಅಲ್ಲಾಹನ ಮತ್ತು ಅವನ ಪ್ರವಾದಿಗಳ ಮತ್ತು ಈ ಕಾಲದ ಯಾವ ವಿಷಯಗಳ ಮೇಲೆ ನಡೆದುಕೊಳ್ಳದಿದ್ದರೆ ಧರ್ಮವನ್ನು ಕಳೆದುಕೊಳ್ಳುವಿರೋ, ಮತ್ತು ನಾವು ಮಸೀಹ್ ಮೌಊದ್(ಅ) ಬೈಅತ್ ಮಾಡಿದ್ದೇವೆ ಎಂಬ ದಾವೆ ಅರ್ಥಹೀನವಾಗುವುದು. ಈ ಪರಿಸರದಲ್ಲಿ ನಾಚಿಕೊಳ್ಳುವ ಬದಲು ಭೌತಿಕವಾದಿಗಳಿಗೆ ದಿಟ್ಟವಾಗಿ ಹೇಳಿರಿ. ಪರದೆ ನಮ್ಮ ಧಾರ್ಮಿಕ ಸಮಸ್ಯೆಯಾಗಿದೆ. ನೀವು ನಮ್ಮ ಧರ್ಮದಲ್ಲಿ ಹಸ್ತಕ್ಷೇಪ ಮಾಡುವುದು ಬೇಡ. ಇಲ್ಲಿಯ ವಿದ್ಯೆಗಿಂತ ಅಹ್ಮದಿ ಹುಡುಗಿಯರು ಈ ವಿಷಯವಾಗಿ ಪತ್ರಿಕೆಗಳಲ್ಲಿ ಬರೆಯಿರಿ.

ಹುಝೂರ್(ಅಬಿಅ) ಹೇಳಿದರು. ಸದಾ ನೆನಪಿಡಿರಿ. ಅಲ್ಲಾಹನ ಆದೇಶಾನುಸಾರ ನಡೆದುಕೊಂಡರೆ ಇಹಪರ ಎರಡರಲ್ಲೂ ಜಯಗೊಳಿಸುವಿರಿ. ಆದ್ದರಿಂದ ಸ್ವಯಂ ಅವರಿಗೆ ತಿಳಿಸಿರಿ. ಕೇವಲ ಮಸೀದಿಗೆ ಮತ್ತು ಜಲ್ಸಕ್ಕೆ ಬರಲು ಲಜ್ಜೆದಾಯಕ ವಸ್ತ್ರಗಳು ಮತ್ತು ಪರದೆ ಇರಬಾರದು ಆದರೆ ಇದು ನಿಮ್ಮ ವಿಶೇಷ ಗುರುತಾಗಿರಬೇಕು. ಎಲ್ಲಿಯೇ ಇರಲಿ ಲಜ್ಜೆದಾಯಕ ವಸ್ತ್ರವಿರಬೇಕು. ಹಝ್‌ರತ್ ಮಸೀಹ್ ಮೌಊದ್(ಅ) ರವರ ಈ ಮಾತನ್ನು ಸದಾ ನೆನಪಿಡಬೇಕಾಗಿದೆ "ಭಯಭಕ್ತಿಯುಳ್ಳವರಾಗಿರಿ. ಲೌಕಿಕ ಮೋಹಕ್ಕೆ ಮನ ಸೋಲಬೇಡಿರಿ. ಮುಗ್ಧ ಮತ್ತು ಪರಿಶುದ್ಧರಾಗಲು ಪ್ರಯತ್ನಪಡಿರಿ. ಇದೇ ಅವಸ್ಥೆಯಲ್ಲಿ ನಿಮ್ಮ ಅಂತ್ಯವಾಗಲು ಪ್ರಯತ್ನಿಸಿರಿ. ಮತ್ತೆ ಹೇಳುತ್ತಾರೆ. ಅಲ್ಲಾಹನು ಕಡ್ಡಾಯಗೊಳಿಸಿದ ನಮಾಝ್ ಝಕಾತ್ ಇತ್ಯಾದಿ ವಿಷಯಗಳಲ್ಲಿ ಅಲಕ್ಷ್ಯತನ ಮಾಡದಿರಿ. ನಿಮ್ಮ ಜವಾಬ್ಧಾರಿಯನ್ನು ಎಷ್ಟು ಸಮಂಜಸವಾಗಿ ನಿಭಾಯಿಸಬೇಕೆಂದರೆ ನೀವು ಅಲ್ಲಾಹನ ದೃಷ್ಟಿಯಲ್ಲಿ ಸಜ್ಜನರಾಗಿರಬೇಕು.

ಹುಝೂರ್(ಅಬಿಅ) ಹೇಳಿದರು. ಅಲ್ಲಾಹನು ಪ್ರತಿಯೊರ್ವ ಅಹ್ಮದಿ ಸ್ತ್ರೀಗೆ, ಪ್ರಾಪಂಚಿಕ ಮೋಹಕ್ಕಿಂತ ಧರ್ಮಕ್ಕೆ ಆದ್ಯತೆ ನೀಡುತ್ತಾ ಅಲ್ಲಾಹನ ಮತ್ತು ಅವನ ಪ್ರವಾದಿ ರಸೂಲುಲ್ಲಾಹ್(ಸ) ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಆದೇಶಗಳ ಹಾಗೂ ನಿರ್ದೇಶನಗಳ ಅನುಸಾರ ನಡೆಯುತ್ತಾ ತಾವು ಮತ್ತು ತಮ್ಮ ಪೀಳಿಗೆಗಳು ಧರ್ಮರಕ್ಷಕರಾಗಿ ಅಲ್ಲಾಹನೊಡನೆ ಸಂಬಂಧ ಹೊಂದುವಂತೆ ದಯಪಾಲಿಸಿರಿ. ಅಲ್ಲಾಹನು ನಿಮಗೆ ಈ ಕಾಲದ ಇಮಾಮರನ್ನು ಮನ್ನಿಸುವ ಗೌರವ ನೀಡಿದ್ದಾನೆ. ಸದಾ ಅದನ್ನು ಗೌರವಿಸುವರಾಗಲಿ, ಲೌಕಿಕತೆಯಲ್ಲಿ ಮುಳುಗಿ ದೂರವಾಗದಿರಲಿ, ಆಮೀನ್.

ಕೊನೆಯಲ್ಲಿ ಹುಝೂರ್(ಅಬಿಅ) ಪ್ರಾರ್ಥನೆ ಮಾಡಿಸಿದರು. ಅವರ ಲಜ್ನದೊಂದಿಗಿನ ಈ ಭಾಷಣ 1:40 ಗಂಟೆಯವರೆಗೆ ಜಾರಿಯಲ್ಲಿತ್ತು.

ದುಆ ನಂತರ ಲಜ್ನ ಮತ್ತು ನಾಸಿರಾತ್‌ನ ವಿವಿಧ ತಂಡಗಳಾಗಿ ಅರಬಿ, ಉರ್ದು, ಫ್ರೆಂಚ್ ಭಾಷೆಗಳಲ್ಲಿ ಕವನಗಳು ಮತ್ತು ಪ್ರಾರ್ಥನಾ ಪದ್ಯಗಳು ಪ್ರಸ್ತುಪಡಿಸಿದರು. ಕೊನೆಯಲ್ಲಿ ಆಫ್ರಿಕನ್ ಮಹಿಳೆಯರು ತಮ್ಮ ವಿಶಿಷ್ಠ ಶೈಲಿಯಲ್ಲಿ ಕೆಲವು ತಯ್ಯಬ ಉಚ್ಚರಿಸಿದರು ಮತ್ತು ಅಲ್ಲಾಹು ಅಕ್ಬರ್ ಘೋಷಣೆಗಳನ್ನು ಕೂಗಿದರು.

ಅನಂತರ 2 ಗಂಟೆಗೆ ಸಯ್ಯದನಾ ಹುಝೂರ್(ಅಬಿಅ) ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿ ಝುಹರ್, ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಫ್ರೆಂಚ್ ಅತಿಥಿಗಳೊಡನೆ ಕಾರ್ಯಕ್ರಮ**

ಕಾರ್ಯಕ್ರಮದನ್ವಯ 6:40 ಗಂಟೆಗೆ ಹುಝೂರ್(ಅಬಿಅ) ಪುರುಷರ ಮಾರ್ಕಿಯಲ್ಲಿ ಆಗಮಿಸಿದರು ಮತ್ತು ಫ್ರೆಂಚ್ ಅತಿಥಿಗಳೊಡನೆ ಕಾರ್ಯಕ್ರಮ ಪ್ರಾರಂಭಿಸಿದರು. ಮುಕರ್ರಮ್ ಅತಾಉಲ್ ಹಯ್ಯಿ ಸಾಹಿಬ್ ಖುರ್‌ಆನ್ ಪಠಣ ಮಾಡಿದರು. ಅನಂತರ ಅದರ ಫ್ರೆಂಚ್ ಅನುವಾದ ಪ್ರಸ್ತುತಪಡಿಸಿದರು. ಅನಂತರ ಮುಕರ್ರಮ್ ಆಸಿಫ್ ಆರಿಫ್ ಸಾಹಿಬ್ National Sec. Umoor-e-amma ಫ್ರಾನ್ಸ್ ತಮ್ಮ ಪರಿಚಯ ಭಾಷಣ ಮಾಡಿದರು.

ಅನಂತರ ಪ್ರಪ್ರಥಮವಾಗಿ Twie chateau ದ Major Mr. David ತಮ್ಮ ಪರಿಚಯ ಭಾಷಣ ಪ್ರಸ್ತುತ ಪಡಿಸಿದರು. ಅದರಲ್ಲಿ ಅವರು ಹೀಗೆ ಹೇಳಿದರು. Twie chateau ಎಂಬ ಈ ಸಣ್ಣದಾದ ನಗರದಲ್ಲಿ ಖಲೀಫರ ಆಗಮನ ನಮಗೆ ತುಂಬ ಸಂತೋಷದ ಹಾಗೂ ಗೌರವದ ವಿಷಯವಾಗಿದೆ. ಈ ಸಮುದಾಯ ಅಹ್ಮದಿಯಾ ಜಮಾಅತಿನೊಂದಿಗೆ ಸಂಬಂಧ ಬೆಳೆಸುವುದರಲ್ಲಿ ಶಾಂತಿಯ ಸಂದೇಶ ಅತ್ಯಂತ ಪ್ರಮುಖವಾಗಿದೆ. ನನಗೆ ಭರವಸೆ ಇದೆ. ಹವಾಮಾನ ಸರಿಯಿಲ್ಲದಿದ್ದರೂ ನಿಮ್ಮ ಜಲ್ಸ ಆರಾಮದಾಯಕವಾಗಿ ನಡೆಯುವದು ಎಂದು. ಈ ಸ್ಥಳವು ಪ್ಯಾರಿಸ್ ನಗರಕ್ಕೆ ಸಮೀಪವಾಗಿದೆ, ತುಂಬ ಒಳ್ಳೆಯ ಹವಾಮಾನವಿದೆ. ನೀವು ನಮ್ಮನ್ನು ಅರಿಯುವಿರಿ ಮತ್ತು ನಿಮ್ಮ ಪರಿಚಯ ನೀಡುವಿರಿ. ನಾನು ನಿಮ್ಮೆಲ್ಲರರಿಗೆ ವಿಶೇಷವಾಗಿ ಖಲೀಫರು ಇಲ್ಲಿ ಆಗಮಿಸಿದ್ದಕ್ಕೆ ತುಂಬ ಕೃತಜ್ಞನಾಗಿದ್ದೆನೆ. ನಿಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸ ಬಯಸುತ್ತೇನೆ.

ಅನಂತರ Dr. Ammelise Detalix ಸಾಹಿಬಾ ತಮ್ಮ ಪರಿಚಯ ಭಾಷಣ ಪ್ರಸ್ತುಪಡಿಸಿದರು. ಅವರು ಪ್ಯಾರಿಸ್ ವಿಶ್ವವಿದ್ಯಾನಿಲಯದೊಂದಿಗೆ ಸಂಬಂಧಿಸಿದವರಾಗಿದ್ದರೆ ಮತ್ತು South east Asian Department ನಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅವರು ಹೇಳಿದರು. ನಾನು ವೃತ್ತಿಯಿಂದ Socialogist ಆಗಿದ್ದೇನೆ ಮತ್ತು ಮುಸ್ಲಿಮ್ ಅಲ್ಪಸಂಖ್ಯಾತರ ಕುರಿತು ಸಂಶೋಧನೆ ನಡೆಸುತ್ತಿದ್ದೇನೆ. ಈ ಅಸಾಧಾರಣ ಸಮಾರಂಭದಲ್ಲಿ ನನಗೆ ಆಹ್ವಾನಿಸಿರುವುದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ನಾನು 10 ವರ್ಷಗಳಿಂದ ಅಹ್ಮದಿಯರನ್ನು ಬಲ್ಲೆ. ಪ್ರಪ್ರಥಮವಾಗಿ ಅಹ್ಮದಿಯರೊಡನೆ ನನ್ನ ಭೇಟಿ ಇಂಡೋನೇಷಿಯಾದಲ್ಲಾಯಿತು. ಅಲ್ಲಿ ಅವರು ತುಂಬ ವಿರೋಧವನ್ನು ಎದುರಿಸುತ್ತಿದ್ದರು. ನಾನು ಅವರಿಂದ ತುಂಬ ಪ್ರಭಾವಿತನಾಗಿದ್ದೆ. ಮತ್ತೆ ಕಂಬೋಡಿಯಾದಲ್ಲಿ ಅಹ್ಮದಿಯರೊಂದಿಗೆ ನನ್ನ ಭೇಟಿಯಾಯಿತು. ನಾನು Saint Prix ನಲ್ಲಿಯೂ ಮೂರು ವರ್ಷಗಳಿಂದ ಅಹ್ಮದಿಯರೊಡನೆ ಭೇಟಿಯಾಗುತ್ತಿದ್ದೇನೆ. ಧಾರ್ಮಿಕ ಅಲ್ಪಸಂಖ್ಯಾತರ Atlas ನಲ್ಲಿ ಅಹ್ಮದಿಯರ ಕುರಿತು ಒಂದು ಅಧ್ಯಾಯ ಬರೆದಿದ್ದೇನೆ. ಇಂದು ನಮ್ಮ ದೇಶ ಮುಸಲ್ಮಾನರ ವಿಷಯದಲ್ಲಿ ಒಂದು ಸೂಕ್ಷ್ಮ ಕಾಲಘಟ್ಟದಲ್ಲಿ ನಡೆಯುತ್ತಿದೆ. ಇದರ ಉದಾಹರಣೆ ಮೊದಲು ಎಲ್ಲೂ ಸಿಗಲಿಕ್ಕಿಲ್ಲ. ಇಂತಹ ಸಮಯದಲ್ಲಿ ಖಲೀಫರು ನೀಡಿದ ಸಂದೇಶವು ನಮ್ಮ ಮನಸ್ಸುಗಳಿಗೆ ತೃಪ್ತಿ ನೀಡಿದೆ ಮತ್ತು ಅಂಧಕಾರದಿಂದ ಮುಕ್ತಿ ಹೊಂದಲು ಪ್ರೇರಣೆ ನೀಡಿದೆ. ಫ್ರಾನ್ಸ್‌ನಲ್ಲಿ ಇಸ್ಲಾಮೋ ಫೋಬಿಯಾ ತುಂಬ ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಶಾಂತಿ ಮತ್ತು ಪ್ರೀತಿ ಎಂದೂ ಪ್ರತ್ಯೇಕಗೊಳ್ಳುವುದಿಲ್ಲ. ಅಸ್ಸಲಾಮು ಅಲೈಕುಂ.

ಅನಂತರ Dr. Longewish katrine ಸಹಿಬಾ ಅವರು Amthropolgist ಆಗಿದ್ದಾರೆ ಮತ್ತು Uiversity of Jommal Gutemberg ನಲ್ಲಿ ಆಫ್ರೀಕನ್ ಸ್ಟಡೀಸ್‌ನ ಇನ್‌ಚಾರ್ಜ್ ಆಗಿದ್ದಾರೆ. ಅವರು ತಮ್ಮ ಪರಿಚಯ ಭಾಷಣದಲ್ಲಿ ಹೀಗೆ ಹೇಳಿದರು. ಅಹ್ಮದಿಯಾ ಜಮಾಅತ್‌ನೊಂದಿಗೆ ತನ್ನ ಭೇಟಿ ಪಶ್ಚಿಮ ಆಫ್ರಿಕಾದ ದೇಶ ಬೊರ್ಕಿನೋ ಫಾಸೊದಲ್ಲಿರುವ ಒಂದು ಆಸ್ಪತ್ರೆಯಲ್ಲಿ ಆಯಿತು. ಇದಾದ ನಂತರ ನಾವು ಈ ಜಮಾಅತಿನೊಂದಿಗೆ ನನ್ನ ಸಂಬಂಧ ಬೆಳೆಸಿದೆ. ಮತ್ತೆ ಫ್ರಾನ್ಸ್, ಜರ್ಮನಿ ಹಾಗೂ ಇತರ ದೇಶಗಳಲ್ಲಿಯೂ ಈ ಜಮಾಅತ್ತನ್ನು ಕಂಡೆ. ಒರ್ವ Anthorolgist ಆದ ನೆಲೆಯಲ್ಲಿ ಜಮಾಅತಿನ ಕಲ್ಯಾಣಕಾರಿ ಯೋಜನೆಗಳಲ್ಲಿ ವಿಶೇಷವಾಗಿ Humanity first (ಮಾನವೀಯತೆ ಮೊದಲು) ನಲ್ಲಿ ತುಂಬ ಆಸಕ್ತಿ ವಹಿಸುತ್ತಿದ್ದೇನೆ ಮತ್ತು ಈ ಜಮಾಅತಿನ ಆಧ್ಯಾತ್ಮಿಕ ದಾಹ ಹಾಗೂ ಕಲ್ಯಾಣಕಾರಿ ಕಾರ್ಯಗಳಲ್ಲಿ ಭಾಗವಹಿಸಿ ನಡೆಯುವುದು ಘನತೆಯ ಕಾರ್ಯವಾಗಿದೆ. ಆದ್ದರಿಂದಲೇ ನನಗೆ ಖಲೀಫರ ಉಪಸ್ಥಿತಿಯಲ್ಲಿ ಇಂದು ಈ ಸಮಾರಂಭದಲ್ಲಿ (ಜಲ್ಸದಲ್ಲಿ) ಭಾಗವಹಿಸಿ ತುಂಬ ಸಂತೋಷವಾಗುತ್ತಿದೆ. ಬೋರ್ಕಿನೋ ಫಾಸೊದಲ್ಲಿ ಮುದ್ರಣಗೊಳ್ಳುತ್ತಿರುವ ನನ್ನ ಪುಸ್ತಕದ ಒಂದು ಅಧ್ಯಾಯ ಅಹ್ಮದಿಯಾ ಜಮಾಅತ್ ಕುರಿತಾಗಿದೆ. ಬಹುಶಃ ನಿಮಗೆ ಮೆಚ್ಚುಗೆಯಾಗಬಹುದು ಎಂದು ಭಾವಿಸುತ್ತೇನೆ.

ಹುಝೂರ್(ಅಬಿಅ) 6 ಗಂಟೆ 53 ನಿಮಿಷಕ್ಕೆ ಇಂಗ್ಲೀಷ್ ಭಾಷೆಯಲ್ಲಿ ಸಂಬೋದಿಸಿದರು. ಅದರ ಉರ್ದು ಅನುವಾದ ಈ ರೀತಿ ಇದೆ.

**ಹುಝೂರ್(ಅಬಿಅ) ರವರ ಸಂಭೋಧನೆ**

ತಶಹುದ್ ತಊಝ್, ತಸ್ಮಿಯಾ ನಂತರ ಹುಝುರ್ ಹೇಳಿದರು. ನಿಮ್ಮೆಲ್ಲರ ಮೇಲೆ ಅಲ್ಲಾಹನ ಅನುಗ್ರಹ ಹಾಗೂ ಶಾಂತಿಯಿರಲಿ, ಮೊಟ್ಟ ಮೊದಲಾಗಿ ನಾನು ಎಲ್ಲ ಅತಿಥಿಗಳಿಗೆ ಕೃತಜ್ಞತೆಯನ್ನು ಅರ್ಪಿಸ ಬಯಸುತ್ತೇನೆ. ಅವರು ಒಂದು ಮುಸ್ಲಿಂ ಸಮುದಾಯದಿಂದ ಆಯೋಜಿಸಲ್ಪಟ್ಟ ಒಂದು ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸಿದ್ದಾರೆ. ಪ್ರಸಕ್ತ ಕೆಲ ವರ್ಷಗಳಲ್ಲಿ ಕೆಲವು ನಾಮಧಾರಿ ಮುಸ್ಲಿಂ ಸಂಘಟನೆಗಳ ಬರ್ಬತೆ ಮತ್ತು ಹಿಂಸೆ ಫ್ರಾನ್ಸ್ ಒಳಗೊಂಡು ವಿವಿಧ ದೇಶಗಳಲ್ಲಿ ನಡೆಸಿದ್ದು ತುಂಬ ದುಃಖದ ಸಂಗತಿಯಾಗಿದೆ. ಈ ತರಹದ ದೃಷ್ಕೃತ್ಯಗಳನ್ನು ಬಲವಾಗಿ ಖಂಡಿಸುತ್ತೇವೆ. ನಮ್ಮ ಪ್ರಾರ್ಥನೆಗಳು ಮತ್ತು ಅನುಕಂಪ ಆ ದೌರ್ಜನ್ಯಗಳಿಗೆ ತುತ್ತಾದ ಮುಗ್ಧರೊಂದಿಗಿದೆ.

ಹುಝೂರ್(ಅಬಿಅ) ಹೇಳಿದರು. ಭಯೋತ್ಪಾದನೆಯೊಂದಿಗೆ ಇಸ್ಲಾಮಿನ ವಾಸ್ತವ ಶಿಕ್ಷಣಕ್ಕೆ ಯಾವ ಸಂಬಂಧವೂ ಇಲ್ಲ. ಬದಲಾಗಿ ಇಸ್ಲಾಮ್ ಶಾಂತಿ, ಪ್ರೀತಿ, ಸಹನೆ ಮತ್ತು ಮೈತ್ರೀಯ ಧರ್ಮವಾಗಿದೆ. "ಇಸ್ಲಾಂ" ಪದದ ಅರ್ಥವೇ "ಶಾಂತಿ ಮತ್ತು ಅನುಗ್ರಹ" ವಾಗಿದೆ ಆದ್ದರಿಂದ ಒಬ್ಬ ನೈಜ ಮುಸಲ್ಮಾನರೆಂದರೆ ಸ್ವಯಂ ಶಾಂತಿಪೂರ್ಣನಾಗಿರಬೇಕು ಮತ್ತು ಲೋಕದಲ್ಲಿ ಶಾಂತಿ ಹಾಗೂ ಪ್ರೀತಿ ಸ್ಥಾಪಿಸುವ ಪ್ರಯತ್ನದಲ್ಲಿರಬೇಕು. ಮುಸಲ್ಮಾನರಿಗೆ ಪ್ರಾಥಮಿಕ ಹಂತದಲ್ಲಿಯೇ ಈ ಶಿಕ್ಷಣ ನೀಡಲಾಗಿದೆ. ನೀವು ಇತರರನ್ನು ಭೇಟಿಯಾದರೆ ಅವರು ಮುಸ್ಲಿಮರಾಗಲಿ ಮುಸ್ಲಿಮೇತರಾಗಲಿ "ಅಸ್ಸಲಾಮು ಅಲೈಕುಂ" ಎಂದು ಹೇಳಿರಿ. ಅದರ ಅರ್ಥ "ನಿಮ್ಮ ಮೇಲೆ ಶಾಂತಿಯಿರಲಿ" ಎಂದಾಗಿದೆ ಭೇಟಿಯಾಗುವ ಇಸ್ಲಾಮ್ ಈ ವಿಧಾನ ಶಾಂತಿಯ ಸಂಕೇತವಾಗಿದೆ. ಅದು ಇತರರಿಗೆ ಶಾಂತಿ ಮತ್ತು ಪ್ರೀತಿಯ ಸಂದೇಶ ನೀಡುತ್ತದೆ. ಅಲ್ಲದೆ ನಾನು ಎಷ್ಟೋ ಮುಸ್ಲಿಮೇತರರನ್ನು ಕಂಡಿದ್ದೇನೆ. ಅವರು ತಮ್ಮ ಮುಸ್ಲಿಮ್ ಸ್ನೇಹಿತರನ್ನು ಭೇಟಿಯಾಗುವಾಗ ಅವರು ಇಸ್ಲಾಮಿ ಪದ್ಧತಿಯಂತೆ "ಅಸ್ಸಲಾಮು ಅಲೈಕುಮ್" ಎಂದು ಹೇಳಿ ಭೇಟಿ ಮಾಡುತ್ತಾರೆ. ಹೀಗೆ ನಮ್ಮ ಧರ್ಮ ಪ್ರತಿಯೊಬ್ಬರ ಮೇಲೆ ಶಾಂತಿ ಹಾಗೂ ಪ್ರೀತಿ ಬಯಸುವಾಗ ಅದರ ಜೊತೆಯಲ್ಲಿ ಜನರ ವಿರೋಧದಲ್ಲಿ ಅವರ ಹಕ್ಕುಗಳನ್ನು ದಮನಿಸಲು ಹೇಳಲು, ಅವರ ವಿರುದ್ಧ ಸಿಡಿದೆದ್ದು ಖಡ್ಗ ಎತ್ತಲು ಸಿದ್ಧರಾಗಿರುವಂತೆ ಪ್ರೇರೇಪಿಸಲು ಸಾಧ್ಯವೇ ಇಲ್ಲ. ಈ ವಿರೋಧಾಭಾಸ ಶಿಕ್ಷಣ ಅಸಾಧ್ಯವಾಗಿದೆ. ಆದ್ದರಿಂದ ದಿಟವಾಗಿ ನೆನಪಿಡಿರಿ. ಪ್ರತಿ ನೆಲೆಯ ಉಗ್ರವಾದ, ಹಿಂಸೆ, ಉದ್ದಟತನ ಇಸ್ಲಾಮಿ ಶಿಕ್ಷಣಕ್ಕೆ ಅಪ್ಪಟ ವಿರೋಧವಾಗಿದೆ.

ಹುಝೂರ್(ಅಬಿಅ) ಹೇಳಿದರು. ಇಸ್ಲಾಮಿನ ವಾಸ್ತವ ತಿಳಿಯಲು ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಮುಸ್ತಫ್(ಸ) ರವರ ಕಾಲದ ಕುರಿತು ಅಭ್ಯಸಿಸುವುದು ಅವಶ್ಯವಾಗಿದೆ. ಅವರು ಅಲ್ಲಾಹನ ಪ್ರವಾದಿಯಾಗುವ ದಾವೆ ಮಾಡಿದಾಗ ಅವರ ಮತ್ತು ಅವರ ಸಂಗಡಿಗರ ಮೇಲೆ ತೀವ್ರತರದ ಹಿಂಸೆ ಬರ್ಬರತೆ ಎಸಗಿದರು. ಪ್ರಾಥಮಿಕ ಹಂತದ ಮುಸಲ್ಮಾನರಲ್ಲಿ ಒಬ್ಬರು ಇಬ್ಬರು ಮಾತ್ರ ಶ್ರೀಮಂತ ಹಾಗೂ ಗೌರವಯುತ ಕುಟುಂಬದವರಾಗಿದ್ದರು. ಆದರೆ ಹೆಚ್ಚಿನವರು ಬಡವರು ಮತ್ತು ಗುಲಾಮರಾಗಿದ್ದರು. ಉಳಿದ ಅವಿಶ್ವಾಸಿಗಳು ಇವರನ್ನು ಭಯಪಡಿಸಲು ಮತ್ತು ಗದರಿಸಲು ಅವರ ಮೇಲೆ ಭೀಕರವಾದ ಹಿಂಸೆ ಬರ್ಬರತೆ ಎಸಗುತ್ತಿದ್ದರು. ಆದರೆ ರಸೂಲುಲ್ಲಾಹ್(ಸ) ಮಹೋನ್ನತವಾದ ಸಹನೆ ಹಾಗೂ ಶೌರ್ಯದಿಂದ ಈ ಅಮಾನವೀಯ ವ್ಯವಹಾರ ಮತ್ತು ಕಠೋರವಾದ

ಅನ್ಯಾಯಗಳನ್ನು ಸಹಿಸುತ್ತಿದ್ದರು ಮತ್ತು ತನ್ನ ಅನುಯಾಯಿಗಳಿಗೂ ಅದೇ ರೀತಿಯ ಉಪದೇಶ ಮಾಡುತ್ತಿದ್ದರು. ಉದಾಹರಣೆಯಾಗಿ ಒಂದು ಸಂದರ್ಭದಲ್ಲಿ ಒಂದು ಮುಸಲ್ಮಾನ ದಂಪತಿಗಳು ಮತ್ತು ಅವರ ಸಣ್ಣ ಸಣ್ಣ ಮಕ್ಕಳಿಗೆ ಅವಿಶ್ವಾಸಿಗಳು ಹಿಂಸಿಸುತ್ತಿದ್ದನ್ನು ರಸೂಲುಲ್ಲಾಹ್(ಸ) ಕಂಡರು. ಈ ದೌರ್ಜನ್ಯಗಳು ನಡೆಸುತ್ತಿರುವುದು ನೋಡಿದಾಗಲೂ ಅವರಿಗೆ ಸಹನೆಯ ಉಪದೇಶ ನೀಡಿದರು. ಅವರ ಮೇಲೆ ಸೇಡು ತೀರಿಸಿಕೊಳ್ಳಲು ಹೇಳಲಿಲ್ಲ. ಇತರ ಮುಸಲ್ಮಾನರಿಗೆ ಅವರ ವಿರುದ್ಧ ಹೋರಾಡಲು ಕರೆಯಲಿಲ್ಲ. ಬದಲಾಗಿ ಅವರು ತನ್ನ ಸಹಾಬರಿಗೆ ಶಾಂತಿಯಿಂದಿರಲು ಉಪದೇಶ ನೀಡಿದರು. ಅವರ ಜೀವಗಳಿಗೆ ಕುತ್ತು ಬಂದರೂ ಲೆಕ್ಕಿಸಲಿಲ್ಲ. ಅವರು ಉಪದೇಶ ನೀಡಿದರು. ಇದರ ಫಲ ಅಂತ್ಯದ ದಿನದಂದು ಅಲ್ಲಾಹನು ನಿಮಗೆ ನೀಡುವನು ಎಂದರು. ಹುಝೂರ್(ಅಬಿಅ) ಹೇಳಿದರು. ಆದ್ದರಿಂದ ರಸೂಲುಲ್ಲಾಹ್(ಸ) ಮತ್ತು ಸಹಾಬರು ಹಲವು ವರ್ಷಗಳವರೆಗೆ ಈ ದೌರ್ಜನ್ಯಗಳನ್ನು ಸಹಿಸಿಕೊಂಡರು ಮತ್ತು ಕೊನೆಗೆ ಮದೀನಕ್ಕೆ ವಲಸೆ ಹೋಗಬೇಕಾಯಿತು. ಅಲ್ಲಿ ತಮ್ಮ ಧರ್ಮದಲ್ಲಿ ನಡೆದುಕೊಳ್ಳುವ ಸ್ವಾತಂತ್ರ್ಯವಿತ್ತು ಮತ್ತು ಶಾಂತಿಯಿಂದ ಜೀವನ ನಡೆಸಬಹುದಾಗಿತ್ತು. ಆದರೆ ವಲಸೆ ಹೋಗಿ ಕೆಲ ವರ್ಷ ಕಳೆದಿರಲಿಲ್ಲ. ಮಕ್ಕ ಅವಿಶ್ವಾಸಿಗಳು ಮುಸಲ್ಮಾನರನ್ನು ಹಿಂಬಾಲಿಸುತ್ತ ಆ ಹೊಸ ನಾಡಿಗೂ ಬಂದರು. ಅಲ್ಲಿಯೂ ಮುಸ್ಲಿಮರ ವಿರುದ್ಧ ಯುದ್ಧ ಪ್ರಾರಂಬಿಸಿದರು. ಆಗ ಅಲ್ಲಾಹನು ಪ್ರಥಮ ಬಾರಿಗೆ ಮುಸಲ್ಮಾನರಿಗೆ ಹೋರಾಡಲು ಅನುಮತಿ ದೊರೆಯಿತು. ಈ ಅನುಮತಿಯ ವಿವರಣೆ ಪವಿತ್ರ ಖುರ್ಆನಿನಲ್ಲಿ ಸೂರಃ ಅಲ್‌ಹಜ್ಜ್ ವಚನ 40, 41 ರಲ್ಲಿ ಕಾಣಬಹುದು. ಈ ವಚನಗಳಲ್ಲಿ ಅಲ್ಲಾಹನು ಹೇಳಿದನು. ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ಈ ಜನರು ಕೇವಲ ಇಸ್ಲಾಮ್ ಧರ್ಮ ಮಾತ್ರವಲ್ಲ ಧರ್ಮವನ್ನೆ ಅಸ್ತಿತ್ವವಿಲ್ಲದಂತೆ ಮಾಡಬಯಸುತ್ತಾರೆ. ಪವಿತ್ರ ಖುರ್ಆನ್ ನಿರ್ದೇಶಿಸುತ್ತದೆ. ಮುಸಲ್ಮಾನರಿಗೆ ಆತ್ಮರಕ್ಷಣೆಗೋಸ್ಕರ ಯುದ್ಧದ ಅನುಮತಿ ನೀಡದಿರುತ್ತಿದ್ದರೆ ಯಾವ ಸನ್ಯಾಸಿ ಮಠ, ಚರ್ಚ್, ಮಸೀದಿ ಅಥವಾ ಯಾವ ಧರ್ಮದ ಆರಾಧನಾ ಸ್ಥಳವು ಸುರಕ್ಷಿತವಾಗಿರುತ್ತಿರಲಿಲ್ಲ. ಆದ್ದರಿಂದ ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬರಿಗೆ ವಿನಾಶರಾಗಿ ಯುದ್ಧಗಳಲ್ಲಿ ಭಾಗವಹಿಸಬೇಕಾಯಿತು. ಇದೆಲ್ಲ ಜನರ ಹಕ್ಕುಗಳ ರಕ್ಷಣೆಗೋಸ್ಕರವಾಗಿತ್ತು. ಇದು ಕ್ರೈಸ್ತ, ಯಹೂದಿ, ಹಿಂದೂ, ಮುಸ್ಲಿಮ್ ಮತ್ತು ಇತರ ಧರ್ಮಗಳ ಹಾಗೂ ವಿಶ್ವಾಸಗಳ ಜನರು ತಮ್ಮ ತಮ್ಮ ವಿಶ್ವಾಸಗಳಂತೆ ಆರಾಧನೆ ಮಾಡುವ ಹಕ್ಕುಗ್ಗಳನ್ನು ರಕ್ಷಿಸುವ ಉದ್ದೇಶ ಹೊಂದಿತ್ತು.

ಹುಝೂರ್(ಅಬಿಅ) ಹೇಳಿದರು ಇಸ್ಲಾಮ್ ಮುಸಲ್ಮಾನರನ್ನು ಬಲವಂತವಾಗಿ ತಮ್ಮ ಶಿಕ್ಷಣದ ಪ್ರಚಾರ ಮಾಡಲು ಮತ್ತು ಇತರ ದೇಶಗಳ ಮೇಲೆ ಆಕ್ರಮಣ ಮಾಡಲು, ಇತರ ಧರ್ಮಗಳನ್ನು ಕೊನೆಗಾಣಿಸಲು ಅನುಮತಿ ನೀಡುತ್ತದೆ ಎಂಬ ಆರೋಪವು ಸರ್ವಥ ತಪ್ಪು, ಪವಿತ್ರ ಖುರ್ಆನ್ ಸ್ಪಷ್ಟವಾಗಿ ವಿವರಿಸಿದೆ. ಇತರ ಧರ್ಮಗಳನ್ನು ರಕ್ಷಿಸುವುದು ಮತ್ತು ಇತರ ಧರ್ಮದವರ ಅನುಯಾಯಿಗಳನ್ನು ರಕ್ಷಿಸುವುದು ಮುಸಲ್ಮಾನರ ಕರ್ತವ್ಯವಾಗಿದೆ. ವಾಸ್ತವವೇನೆಂದರೆ ಪ್ರಾಥಮಿಕ ಹಂತದ ಮುಸಲ್ಮಾನರು ವ್ಯಕ್ತಿ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯಗಳ ಶಾಶ್ವತ ಸಿದ್ಧಾಂತಗಳನ್ನು ಸ್ಥಾಪಿಸಲು ತಮ್ಮ ಪ್ರಾಣಗಳನ್ನೇ ಅರ್ಪಿಸಿದ್ದಾರೆ. ಈ ಸ್ವಾತಂತ್ರ್ಯವು ಮುಸ್ಲಿಮರ ವಿಶ್ವಾಸದ ತಳಹದಿಯಾಗಿದೆ ಮತ್ತು ಶಾಶ್ವತವಾಗಿ ಪವಿತ್ರ ಖುರ್ಆನಿನಲ್ಲಿ ಸುರಕ್ಷಿತಗೊಂಡಿದೆ. ಪವಿತ್ರ ಖುರ್ಆನಿನ ಅಧ್ಯಾಯ ಅಲ್ ಬಖರದ ವಚನ 257 ರಲ್ಲಿ ಅಲ್ಲಾಹನು ಸ್ಪಷ್ಟವಾಗಿ ತಿಳಿಸಿದನು. “ಧರ್ಮದಲ್ಲಿ ಯಾವುದೇ ರೀತಿಯ ಬಲವಂತವಿಲ್ಲ.” ಈ ಸ್ವಾತಂತ್ರ್ಯ ಕಲ್ಪನೆ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಬೋಧನಾ ಸ್ವಾತಂತ್ರ್ಯದ ಪೈಕಿ ಸ್ಪಷ್ಟವಾದ ನಿಲುವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಹುಝೂರ್(ಅಬಿಅ) ಹೇಳಿದರು. ಇಸ್ಲಾಮ್‌ನ ಸ್ಥಾಪಕರು ಮತ್ತು ಖಲೀಫರ ಕಾಲಗಳಲ್ಲಿ ಮುಸ್ಲಿಮೇತರ ಜನರ ಹಕ್ಕುಗಳನ್ನು ಎಂದೂ ಧಮನಿಸಲಾಗಿಲ್ಲ. ಹಾಗೆಯೇ ಅವರನ್ನು ಇಸ್ಲಾಮ್ ಸ್ವೀಕರಿಸಲು ಬಲವಂತ ಮಾಡಲಿಲ್ಲ ಅಥವಾ ಅವರಿಗೆ ಅವರ ರಿವಾಜುಗಳನ್ನು, ವಿಶ್ವಾಸಗಳನ್ನು ತ್ಯಜಿಸಲು ಒತ್ತಡ ಹೇರಲಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ತಮ್ಮೆಲ್ಲ ಆಯಸ್ಸು ಪೂರ್ತಿ ಶಾಂತಿ, ಅನ್ಯಧರ್ಮಿಯರೊಡನೆ ಮಾತುಕತೆ ಮತ್ತು ವಿವಿಧ ಸಮುದಾಯಗಳೊಡನೆ ಮೈತ್ರಿ ಹಾಗೂ ಪರಸ್ಪರ ಗೌರವಾದರಗಳನ್ನು ಬಯಸುತ್ತಿದ್ದರು. ಉದಾಹರಣೆಗೆ ಮದೀನಕ್ಕೆ ವಲಸೆ ಬಂದ ನಂತರ ಹಝ್ರತ್ ರಸೂಲುಲ್ಲಾಹ್(ಸ) ಯಹೂದಿಯರೊಡನೆ ಒಂದು ಒಪ್ಪಂದ ಮಾಡಿದರು. ಅದರನ್ವಯ ಒಂದು ಸಂಯುಕ್ತ ಸರಕಾರ ರಚನೆಯಾಯಿತು. ಇಸ್ಲಾಮ್ ಸ್ಥಾಪಕರನ್ನು ಒಕ್ಕೊರಲಿನಿಂದ ನಾಡ ಸರದಾರನ್ನಾಗಿ ಚುನಾಯಿಸಿದರು. ಈ ಒಪ್ಪಂದದ ಶರತ್ತುಗಳ ಪ್ರಕಾರ ಮುಸಲ್ಮಾನರೊಂದಿಗೆ ಯಹೂದಿಯರು ನಾಡ ಪ್ರಗತಿಯಲ್ಲಿ ಸಹಕರಿಸಲು ಹಾಗೂ ವಿಧೇಯ ನಾಗರಿಕರಾಗುವ ವಚನ ಕೈಗೊಂಡರು. ಈ ಒಪ್ಪಂದದನ್ವಯ ಪ್ರತಿಯೊಬ್ಬರಿಗೆ ತಮ್ಮ ಧರ್ಮ ಮತ್ತು ವಿಶ್ವಾಸಗಳನ್ನು ಭಯ, ಆತಂಕವಿಲ್ಲದೇ ಅಥವಾ ನಿರಂತರವಾಗಿ ಪಾಲಿಸುವ ಹಕ್ಕು ನೀಡಲಾಗಿತ್ತು. ಹಝ್ರತ್ ರಸೂಲುಲ್ಲಾಹ್(ಸ) ಎಂದೂ ಈ ಒಪ್ಪಂದವನ್ನು ಉಲ್ಲಂಘಿಸಲಿಲ್ಲ. ಆದರೆ ಬೇರೆಡೆಯಿಂದ ಕೆಲವು ಸಂದರ್ಭಗಳು ಹೀಗೆ ಬಂದವು. ಮುಸ್ಲಿಮೇತರು ಈ ಒಪ್ಪಂದವನ್ನು ಉಲ್ಲಂಘಿಸಿದರು. ಮೊದಲು ನಿಶ್ಚಯಿಸಿದ ಕಾನೂನುಗಳ ಪ್ರಕಾರ ಅವರಿಗೆ ಶಿಕ್ಷೆ ನೀಡಲಾಯಿತು.

ಹುಝೂರ್(ಅಬಿಅ) ನುಡಿದರು. ಇಸ್ಲಾಮ್ ಎಂದೂ ತನ್ನ ಅನುಯಾಯಿಗಳಿಗೆ ತನ್ನ ವಿಶ್ವಾಸ ಪ್ರಚಾರ ಮಾಡಲು ಹಾಗೂ ಯಾವುದೇ ಮುಸ್ಲಿಮ್ ರಾಷ್ಟವನ್ನು ಇಲ್ಲಿ ಕೇವಲ ಮುಸ್ಲಿಮರಿಗೆ ಮಾತ್ರ ಇರಲು ಅನುಮತಿ ಇದೆ ಎಂದು ಘೋಷಿಸಲು ಅನುಮತಿ ನೀಡಲಿಲ್ಲ. ನಾನು ಹೇಳಿದಂತೆ ಮದೀನ ಒಪ್ಪಂದದನ್ವಯ ಪ್ರತಿ ಸಮುದಾಯದವರಿಗೆ ತಮ್ಮ ರೀತಿ ಹಾಗೂ ವಿಶ್ವಾಸಗಳಂತೆ ನಡೆಯುವ ಸ್ವಾತಂತ್ರ್ಯ ನೀಡಲಾಗಿತ್ತು. ಆ ಸಮಾಜವು ಒಂದು ಪ್ರಮುಖ ಸಿದ್ಧಾಂತದ ಮೇರೆಗೆ ಐಕ್ಯವಾಗಿತ್ತು. ಪ್ರತಿಯೊಬ್ಬರು ಧರ್ಮ ವಿಶ್ವಾಸಗಳ ಭೇದವಿಲ್ಲದೇ ತಮ್ಮ ತಮ್ಮ ಜವಾಬ್ಧಾರಿಗಳನ್ನು ನಿರ್ವಹಿಸಲು ಮತ್ತು ನಾಡಿನ ವಿಧೇಯ ನಾಗರಿಕನಾಗಲು ಬದ್ಧರಾಗಿದ್ದರು. ಸಮಾಜಕ್ಕೆ ಕಂಟಕವಾಗುವಂತಹ, ಶಾಂತಿ ರಕ್ಷಣೆಗೆ ಅಪಾಯ ಒಡ್ಡುವಂತಹ ಕಾರ್ಯಗಳಿಂದ ದೂರವಿರಲು ವಚನಬದ್ಧರಾಗಿದ್ದರು. ಆದ್ದರಿಂದ ಬೆರಳಣಿಕೆಯಷ್ಟು ಕೆಲ ಮುಸಲ್ಮಾನರ ದಾರಿತಪ್ಪಿಸುವ ಹಾಗೂ ದುಷ್ಕರ್ಮಗಳನ್ನು ನೋಡಿ ಶಾಂತಿಪ್ರೀಯ ಇಸ್ಲಾಮ್ ಧರ್ಮದ ಮೇಲೆ ಇಂತಹ ಆರೋಪ ಸರ್ವಥ ಅನ್ಯಾಯಪೂರ್ಣವಾಗಿದೆ. ಇಂಥ ಜನರು ಮತ್ತು ಸಂಘಟನೆಗಳು ಉಗ್ರವಾದವನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಇಸ್ಲಾಮಿನೊಂದಿಗೆ ಇದರ ಯಾವ ಸಂಬಂಧವೂ ಇಲ್ಲ. ಅವರು ಬೇಕಾದ ರೀತಿಯಲ್ಲಿ ತಮ್ಮ ದ್ವೇಷ ಭರಿತ ಕ್ರಮಗಳನ್ನು ಇಸ್ಲಾಮಿನ ಹೆಸರಿನಲ್ಲಿ ಬಳಸುತ್ತಿರಬಹುದು. ಆದರೆ ವಾಸ್ತವದಲ್ಲಿ ಇವರು ಕೇವಲ ಮತ್ತು ಕೇವಲ ಪವಿತ್ರ ಖುರ್ಆನಿನ ಹಾಗೂ ಇಸ್ಲಾಮಿನ ಸ್ಥಾಪಕರ ಪರಿಶುದ್ಧ ಮತ್ತು ಶಾಂತಿಪ್ರಿಯ ಶಿಕ್ಷಣಗಳನ್ನು ಅಪಮಾನಿಸುತ್ತಿದ್ದಾರೆ.

ಹುಝೂರ್(ಅಬಿಅ) ಹೇಳಿದರು. ಪವಿತ್ರ ಖುರ್ಆನಿನ ಪ್ರತಿ ಪುಟವು ಪ್ರಕಾಶಮಯ ಶಿಕ್ಷಣದಿಂದ ತುಂಬಿದೆ. ಅದರಂತೆ ಮುಸಲ್ಮಾನರು ಲೋಕದಲ್ಲಿ ಶಾಂತಿ ಸ್ಥಾಪಿಸುವ ಯಾವ ಸಂದರ್ಭವು ಕಳೆದುಕೊಳ್ಳಬಾರದು. ಉದಾಹರಣೆಗೆ ಪವಿತ್ರ ಖುರ್ಆನನ ಸೂರಃ ಝುಖ್‌ರಫ್ ವಚನ 87, 90 ರಲ್ಲಿ ಹಝುರತ್ ರಸೂಲುಲ್ಲಾಹ್(ಸ) ರವರ ದುಖ ಭರಿತ ಹಾಗೂ ಕರುಣಾಜನಕ ಪ್ರಾರ್ಥನೆಗಳನ್ನು ವಿವರಿಸಲಾಗಿದೆ. ಅದರಲ್ಲಿ ಹಝ್ರತ್ ರಸುಲುಲ್ಲಾಹ್(ಸ) ಅಲ್ಲಾಹನಿಂದ ಬೇಡುತ್ತಿದ್ದಾರೆ. ಅದು ಪ್ರೀತಿಯಿಂದ ತುಂಬಿದ ಮತ್ತು ನೈಜ ಶಿಕ್ಷಣವನ್ನು ಜನರ ಮುಂದೆ ಪ್ರಸ್ತುತಪಡಿಸುತ್ತಿದ್ದಾರೆ. ಜನರು ಅದನ್ನು ತಿರಸ್ಕರಿಸುತ್ತಿದ್ದಾರೆ. ಉತ್ತರವಾಗಿ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಜನರನ್ನು ಕ್ಷಮಿಸಲು ಮತ್ತು ಶಾಂತಿಯ ಸಂದೇಶವನ್ನು ತಲುಪಿಸುವ ಉಪದೇಶ ನೀಡುತ್ತಾರೆ.

ಹುಝೂರ್(ಅಬಿಅ) ಹೇಳಿದರು. ಶಾಂತಿ ಪದದ ಅರ್ಥ ವಿಶ್ವಾಸ ಹೊಂದುವುದು ಮತ್ತು ಶಾಂತಿ ಬಯಸುವುದು. ಈ ನೆಲೆಯಲ್ಲಿ ಅಲ್ಲಾಹನು ರಸೂಲುಲ್ಲಾಹ್(ಸ) ರವರನ್ನು ಇಸ್ಲಾಮಿನ ಸಂದೇಶ ತಲುಪಿಸಲು ಮತ್ತು ಉಳಿದ ವಿಷಯ ಅಲ್ಲಾಹನ ಮೇಲೆ ಬಿಡಲು, ಯಾರು ಈ ಸಂದೇಶವನ್ನು ನಿರಾಕರಿಸಿದರು ಅವರಿಗೆ ನಿರಂತರವಾಗಿ ಶಾಂತಿ ನೀಡುವ ಉಪದೇಶ ನೀಡಿದೆ. ಪವಿತ್ರ ಖುರ್ಆನ್ ಯಾವ ಒಂದು ಸ್ಥಳದಲ್ಲಿಯೂ ತಿರಸ್ಕರಿಸುವವರ ವಿರುದ್ಧ ದೌರ್ಜನ್ಯ ಮಾಡಲು ಮತ್ತು ಬಲಪ್ರಯೋಗ ಮಾಡಲು ಶಿಕ್ಷಣ ನೀಡಲಿಲ್ಲ. ಬದಲಾಗಿ ಮುಸಲ್ಮಾನರನ್ನು ಸಹಿಸಲು ಹಾಗೂ ತಾಳ್ಮೆ ವಹಿಸಲು ಉಪದೇಶ ಮಾಡಿದೆ. ಆದ್ದರಿಂದ ಇಂದಿನ ನಾಮಧಾರಿ ಮುಸ್ಲಿಮ್ ಮುಖಂಡರು ಅಥವಾ ಇಸ್ಲಾಮಿ ಸರಕಾರಗಳು ಉಗ್ರವಾದ ಮತ್ತು ಧರ್ಮಾಂಧತೆಯನ್ನು ಪ್ರದರ್ಶಿಸುತ್ತಿವೆ. ಅದರ ಅಪವಾದ ಅವರ ಹೆಗಲ ಮೇಲೆಯೇ ಇದೆ. ಅವರ ಕಪಟ ಮತ್ತು ಅಸಂಮಂಜಸ ಕೃತ್ಯಗಳಿಂದಾಗಿ ಲೋಕದ ಶಾಂತಿ ಮತ್ತು ಭಾತೃತ್ವ ನಾಶಗೊಳ್ಳುತ್ತಿವೆ. ಅದನ್ನು ಯಾವ ನೆಲೆಯಲ್ಲಿ ಸಮರ್ಥಿಸಲು ಸಾಧ್ಯವಿಲ್ಲ. ಇದರ ನಷ್ಟ ತುಂಬಲು ಸಾಧ್ಯವಿಲ್ಲ.

**(ಮುಂದುವರಿಯುವುದು)**

*******************

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**

**Mob or whatsapp: 8050330779**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 05 March 2020 Issue No. 08

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಸರ್ಕುಲರ್ ಸಂಖ್ಯೆ 07ರ ವರದಿಯ ಉಳಿದ ಭಾಗ)**

**5 ಅಕ್ಟೋಬರ್ 2019 ಶನವಾರ:**

ಹುಝೂರ್ 6 ಗಂಟೆ 45 ನಿಮಿಷಕ್ಕೆ ಆಗಮಿಸಿ ನಮಾಝ್ ಫಜರ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು. ಮುಂಜಾನೆ ಹುಝೂರ್ ಕಚೇರಿ ಕಾರ್ಯಗಳನ್ನು ನಿರ್ವಹಿಸಿದರು.

**ಹುಝೂರರೊಂದಿಗೆ ಮಹಿಳೆಯರ ಇಜ್‌ಲಾಸ್(ಸಭೆ):**

ಇಂದು ಕಾರ್ಯಕ್ರಮದ ಅನ್ವಯ ಲಜ್ನ ಜಲ್ಸ ಸ್ಥಳದಲ್ಲಿ ಹುಝೂರರ ಸಂಬೋಧನೆ ನಡೆಯಬೇಕಾಗಿತ್ತು. ಕಾರ್ಯಕ್ರಮದನ್ವಯ 12 1/2 ಗಂಟೆಗೆ ಹುಝೂರ್ ಲಜ್ನ ಜಲ್ಸ ಸ್ಥಳಕ್ಕೆ ಆಗಮಿಸಿದರು. ಸದರ್ ಲಜ್ನ ಇಮಾಉಲ್ಲಾಹ್ ಫ್ರಾನ್ಸ್ ಫರ್‌ಹತ್ ಸಾಹಿಬ, ನಾಝಿಮಾ ಆಲಾ ತಮ್ಮ ನಾಯಿಬ್ ನಾಝಿಮಾತ್ ಜೊತೆಯಲ್ಲಿ ಹುಝೂರರಿಗೆ ಸ್ವಾಗತಿಸಿದರು. ತಮ್ಮ ಪ್ರಿಯ ಇಮಾಮರಿಗೆ ಶುಭ ಕೋರಿದರು.

ಇಜ್ಲಾಸಿನ ಪ್ರಾರಂಭವು ಪವಿತ್ರ ಖುರ್‌ಆನಿನ ಪಠಣದಿಂದಾಗಿತ್ತು. ಅದನ್ನು ಅಝೀಝು ಅನ್‌ಅಮ್ ಕಾಹಿಲೂ ಸಾಹಿಬ ನೇರವೇರಿಸಿದರು. ಅದರ ಉರ್ದು ಅನುವಾದವು ಅಝೀಝು ಹಾಜಿರ ಹಾದಿ ಸಾಹಿಬ ಪ್ರಸ್ತುತಪಡಿಸಿದರು. ಅನಂತರ ಅಝೀಝು ಆಯಿಶ ಸಂದಸ್ ಸಾಹಿಬ ಹಝ್ರತ್ ಮಸೀಹ್ ಮೌಊದ್ (ಅ) ರವರ ಕವನ

"ಇಕ್‌ನ ಇಕ್ ದಿನ್ ಪೇಶ್ ಹೋಗ ತೂ ಫನಾ ಕೆ ಸಾಮ್ನೆ
ಚಲ್ ನಿಹಿ ಸಕ್ತಿ ಶಿಸೀಕಿ ಕುಜ್ ಖಝು ಕೆ ಸಾಮ್ನೆ"

ಮಧುರ ಕಂಠದಿಂದ ಪ್ರಸ್ತುತಪಡಿಸಿದರು.

ಅನಂತರ ಕಾರ್ಯಕ್ರಮದಂತೆ ಹುಝೂರ್(ಅಬಿಅ) ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ದರ್ಜೆ ಪಡೆದ 41 ವಿದ್ಯಾರ್ಥಿನಿಯರಿಗೆ ಸನದುಗಳನ್ನು ನೀಡಿದರು. ಪ್ರಶಸ್ತಿ ಪಡೆದ ಆ ಅದೃಷ್ಟವಂತ ವಿದ್ಯಾರ್ಥಿನಿಯರ ಹೆಸರುಗಳು ಕೆಳಗೆ ನಮೂದಿಸಲಾಗಿದೆ.

| |
|---|
| ಇಖ್ರ ಖಲೀಲ್<br>BTECನ್ಯಾಶ್ನಲ್ ಡಿಪ್ಲೋಮ |
| ಮೆಹ್ ಜಬೀನ್<br>BTECನ್ಯಾಶ್ನಲ್ ಡಿಪ್ಲೋಮ |
| ಸಾಎರಹ್ ಕಂವಲ್ ದಾಊದ್<br>BTECನ್ಯಾಶ್ನಲ್ ಡಿಪ್ಲೋಮ |
| ಖಮರ್ ಝಿಯಾ<br>BTECನ್ಯಾಶ್ನಲ್ ಡಿಪ್ಲೋಮ |
| ದುರ್ರೆಸಮೀನ್ ತೂಬ ವಸೀಮ್<br>BTECನ್ಯಾಶ್ನಲ್ ಡಿಪ್ಲೋಮ |
| ತೂಬ ತಾಹಿರ್<br>BTECನ್ಯಾಶ್ನಲ್ ಡಿಪ್ಲೋಮ |
| ಅನೀಝು ಆಸಿಮ್<br>ಮಾಸ್ಟರ್ಸ್ ಇನ್ ಸೈನ್ಸ್ |
| Ines Rezig<br>A-Level |
| Amina Chettih<br>A-Level |
| Imane Haddioui<br>A-Level |
| Nughz Tul Zahra<br>B.A Textile Designing |
| Zunubiya Amir<br>B.A in Science (Degital & creative Media) |
| Ines Doobory<br>B.A Modern literature |
| Fouziya chaudhry<br>Masters in Homoeopathy |
| Asifa Khan<br>Masters in Science of Meditation |
| Sadiya Zafar<br>Masters in Pscychology |
| Atiya kausar<br>Masters in History |
| Rizwana ijaz<br>Masters in Mathematics |
| Mubashira Sadaf<br>Masters in Urdu |
| Shafeeqa Ishtiyaaq<br>Masters in Foriegn Languages, International Relation and comparisions |
| Azqa Ghulam<br>Masters in Management |

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.